# ಪುಣ್ಯಸ್ಮೃತಿ

ಮೂಲ ಬಂಗಾಳಿ : **ಚಂದ್ರಮೋಹನ ದತ್ತ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೩



ಎಲ್ಲವನ್ನೂ ಶರತ್ ಮಹಾರಾಜರೇ ಮಾಡಿಸಿಕೊಟ್ಟರು. ಮೂರೂವರೆ ಕೋಠಾ ಜಾಗದಲ್ಲಿ ಮನೆ, ಉಳಿದ ಜಮೀನಿನಲ್ಲಿ ತರಕಾರಿ ಬೆಳೆಯುವ ತೋಟ. ಮನೆ ನಿರ್ಮಾಣ ಮಾಡುವ ಎಲ್ಲ ಖರ್ಚು, ಎಲ್ಲ ವ್ಯವಸ್ಥೆ ಮಾಡಿಸಿಕೊಡುವ ಜವಾಬ್ದಾರಿ ಎಲ್ಲವನ್ನೂ ಶರತ್ ಮಹಾರಾಜರೇ ಹೊತ್ತುಕೊಂಡರು. ಹೊಸ ಮನೆಗೆ ನನ್ನ ಪತ್ನಿ, ಮಕ್ಕಳಿಬ್ಬರನ್ನೂ ಕರೆದುಕೊಂಡು ಬಂದೆ. ಇಟ್ಟಿಗೆಯ ಗೋಡೆ ಹಾಗೂ ಟಿನ್ನಿನ ಚಾವಣಿ. ಒಂದು ಮರದ ಹಲಗೆಯನ್ನು ನಿಲ್ಲಿಸುವ ಮೂಲಕ ಶರತ್ ಮಹಾರಾಜ್ ಶಂಕುಸ್ಥಾಪನೆ ಮಾಡಿದರು. ಆಗ ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ಅವರಿಗೆ ಮೊದಲೇ ಶಂಕುಸ್ಥಾಪನೆಯ ವಿಷಯವನ್ನು ಪತ್ರದ ಮೂಲಕ ಬರೆದು ತಿಳಿಸಿದ್ದೆ. ಅದಕ್ಕೆ ಉತ್ತರವಾಗಿ ಶ್ರೀಮಾತೆ (ಫಾಲ್ಗುಣ ೧೫, ೧೩೨೫, ಬಂಗಾಳಿ ವರ್ಷದಂದು) ನನಗೆ ಬರೆದಿದ್ದರು, ‘‘ನೀನು ಬರೆದ ಪತ್ರ ತಲುಪಿತು. ನೀನು ಬರೆದ ಸಮಾಚಾರವನ್ನೆಲ್ಲ ಓದಿ ತಿಳಿದೆ. ನಿನ್ನ ಮನೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲು ಶರತ್ (ಸ್ವಾಮಿ ಶಾರದಾನಂದಜಿ) ಗೊತ್ತು ಮಾಡಿರುವ ದಿನವೇ ಯೋಗ್ಯವಾಗಿದೆ’’ ಎಂದು. ಗೃಹಪ್ರವೇಶದ ದಿನದಂದು ಮನೆಗೆ ಸಾಧು, ಬ್ರಹ್ಮಚಾರಿಗಳನ್ನೆಲ್ಲ ಕರೆದುಕೊಂಡು ಬಂದೆ. ಅಂದು ಶರತ್ ಮಹಾರಾಜ್ ಬಂದಿರಲಿಲ್ಲ ; ಸ್ವಾಮಿ ವಿರಜಾನಂದರು ಹಾಗೂ ಇನ್ನಿತರರೆಲ್ಲ ಬಂದಿದ್ದರು. ಅವರೆಲ್ಲ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಚಿತ್ರಗಳಿಗೆ ಷೋಡಶೋಪಚಾರ ಪೂಜೆ ಮಾಡಿದರು. ಚಂಡೀ ಪಾಠ (ಶ್ರೀ ದುರ್ಗಾ ಸಪ್ತಶತೀ ಪಾರಾಯಣ) ಹಾಗೂ ರಾಮನಾಮ ಸಂಕೀರ್ತನೆಯನ್ನು ಕೂಡ ಮಾಡಿದರು. ಸ್ವಯಂ ಶ್ರೀಮಾತೆಯವರೇ ‘ಉದ್ಬೋಧನ’ದಲ್ಲಿ ತಮ್ಮ ಹಾಗೂ ಶ್ರೀರಾಮಕೃಷ್ಣರ ಚಿತ್ರಪಟಗಳಿಗೆ ಪೂಜೆ ಮಾಡಿದ್ದರು; ಆ ಪಟಗಳನ್ನು ತಂದು ಹೊಸ ಮನೆಯಲ್ಲಿ ಪೂಜೆ ಮಾಡಲು ಇರಿಸಲಾಗಿತ್ತು. ಇಂದಿಗೂ ಮನೆಯಲ್ಲಿ ಅದೇ ಪಟಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ದೇವರಕೋಣೆಯಲ್ಲಿ ಶ್ರೀಮಾತೆಯವರ ಕೂದಲು, ಉಗುರು, ಬಟ್ಟೆ ಇವನ್ನೆಲ್ಲ ಇಡಲಾಗಿದೆ.[೧] ಮನೆಯಲ್ಲಿ ಶ್ರೀಮಾತೆಯವರ ಪಾದ ಚಿಹ್ನೆಗೆ[೨] ಕಟ್ಟು ಹಾಕಿಸಿ ಇಡಲಾಗಿದೆ; ಶ್ರೀಮಾತೆಯವರ ಪಾದಗಳಿಗೆ ಅರ್ಪಿಸಿದ ಹೂಗಳು, ಅವರು ಮಂತ್ರ ಜಪಿಸಿ ಶುದ್ಧೀಕರಿಸಿ ಕೊಟ್ಟ ಅಳಲೆ ಕಾಯಿ, ಜಪ ಮಾಡಿಕೊಟ್ಟ ರುದ್ರಾಕ್ಷಿಯ ಜಪಮಾಲೆ ಇವುಗಳು ಕೂಡ ಇವೆ. ಒಂದು ಸಲ ಶ್ರೀಮಾತೆ ಒಂದು ಹಿಡಿ ಅಕ್ಕಿಯನ್ನು ನನ್ನ ಕೈಗೆ ಕೊಟ್ಟು, ‘‘ಇವನ್ನು ಬಟ್ಟೆಯಲ್ಲಿ ಕಟ್ಟಿ, ಅಕ್ಕಿಯನ್ನಿಡುವ ಮಡಕೆಯಲ್ಲಿಡು. ಇದರಿಂದ ನಿನಗೆ ಎಂದಿಗೂ ಅಕ್ಕಿಯ ಅಭಾವವುಂಟಾಗದು’’ ಎಂದಿದ್ದರು.

ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ: ಅದನ್ನು ಇಲ್ಲಿಯತನಕ ನನ್ನ ಪತ್ನಿಗಲ್ಲದೆ ಬೇರೆ ಯಾರಿಗೂ ಹೇಳಿಲ್ಲ. ಶ್ರೀಮಾತೆ ನನ್ನ ಮೇಲೆ ದಯೆತೋರಿ, ತೋರಿಸಿ ಕೊಟ್ಟರು ಹಾಗೂ ತಿಳಿಸಿಕೊಟ್ಟರು — ಅದೇನೆಂದರೆ, ಅವರು

---

೧ ಚಂದ್ರಮೋಹನ ದತ್ತರ ಕೊನೆಯ ಮಗ ಕಾರ್ತಿಕಚಂದ್ರ ದತ್ತ ತಿಳಿಸಿರುವಂತೆ, ಮುಂದೆ ಈ ವಸ್ತುಗಳು ಕಳ್ಳತನವಾಗಿ, ಕಳೆದುಹೋದವು. *(–ಸಂ)*

೨ ಶ್ರೀಮಾತೆಯವರ ಪಾದಗಳಿಗೆ ಅಲತಾ (ಒಂದು ರೀತಿಯ ಕೆಂಪು ಬಣ್ಣದ ದ್ರವ್ಯ; ಬಂಗಾಳದಲ್ಲಿ ಮಹಿಳೆಯರು ಪಾದಗಳಿಗೆ ಹಚ್ಚುತ್ತಾರೆ) ಹಚ್ಚಿ, ಅದರ ಮುದ್ರೆಯನ್ನು ಬಟ್ಟೆಯ ಮೇಲೆ ಬರುವಂತೆ ಮಾಡಿ, ಅದನ್ನು ಭಕ್ತರು ತಮ್ಮ ಬಳಿ ಇಟ್ಟುಕೊಂಡು ಪೂಜಿಸುತ್ತಾರೆ. ಅಂಥ ಪಾದ ಚಿಹ್ನೆಗಳು ಇಂದಿಗೂ ಹಲವೆಡೆ, ವಿಶೇಷವಾಗಿ ಆಶ್ರಮಗಳಲ್ಲಿ ಇವೆ. *(–ಅನು.)*

ಸ್ವರ್ಗದ ದೇವತೆ; ನಮ್ಮ ಉದ್ಧಾರಕ್ಕಾಗಿ ಭೂಮಿಯಲ್ಲಿ ಮನುಷ್ಯರಾಗಿ ಜನ್ಮವೆತ್ತಿ ಬಂದರು, ಎಂದು. ಶ್ರೀಮಾತೆ ಬದುಕಿರುವಲ್ಲಿ ತನಕ ಈ ಘಟನೆಯ ಬಗ್ಗೆ ಬೇರೆಯವರಿಗೆ ಹೇಳದಂತೆ ಅವರೇ ನಿಷೇಧ ಮಾಡಿದ್ದರು, ಆದ್ದರಿಂದ ಅದನ್ನು ನಾನು ಯಾರಿಗೂ ಹೇಳಲಿಲ್ಲ. ಆ ಘಟನೆ ಇದು: ಶ್ರೀಮಾತೆಯವರು ಜಯರಾಮಬಾಟಿಗೆ ಹೋಗುತ್ತಿದ್ದಾಗ ನಡುನಡುವೆ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಒಂದು ಸಲ ಶ್ರೀಮಾತೆ ಜಯರಾಮಬಾಟಿಯಿಂದ ಕಲ್ಕತ್ತೆಗೆ ಮರಳಿ ಬರುತ್ತಿದ್ದರು. ನಾವೆಲ್ಲ ಎತ್ತಿನ ಗಾಡಿಯ ಮೂಲಕ ಕೋಯಲ್‌ಪಾರಾ ದಾಟಿ, ವಿಷ್ಣುಪುರಕ್ಕೆ ಹೋಗುತ್ತಿದ್ದೆವು. ಇದ್ದಕ್ಕಿದ್ದಂತೆ ಶ್ರೀಮಾತೆಯವರ ನಿಜವಾದ ರೂಪವನ್ನು ನೋಡಬೇಕೆಂದು ನನಗೆ ತುಂಬಾ ಆಸೆ ಉಕ್ಕಿಬಂತು. ಒಂದೆಡೆ ಗಾಡಿಯನ್ನು ನಿಲ್ಲಿಸಿ, ಒಂದು ಮರದ ಕೆಳಗೆ ಶ್ರೀಮಾತೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ನಿರ್ಜನ ಪ್ರದೇಶದಲ್ಲಿ ಅವರಿದ್ದುದನ್ನು ಕಂಡು ಅವರನ್ನು ಏಕಾಂತದಲ್ಲಿ ಕೇಳಿದೆ: ''ಅಮ್ಮಾ, ನೀವು ನನ್ನನ್ನು ಮಗನಂತೆ ಪ್ರೀತಿಸುತ್ತಿದ್ದೀರಿ. ನಿಮ್ಮ ದಯೆಯಿಂದಾಗಿಯೇ ನಾನು ಹೆಂಡತಿ, ಮಕ್ಕಳನ್ನು ಕಟ್ಟಿಕೊಂಡು ಇಲ್ಲಿಯ ತನಕ ಬದುಕಿದ್ದೇನೆ. ಎಲ್ಲ ಗಂಡಾಂತರಗಳಿಂದಲೂ ನನ್ನನ್ನು ನೀವು ರಕ್ಷಿಸಿದ್ದೀರಿ. ಆದರೆ ನನ್ನಲ್ಲಿ ಒಂದು ಅತೃಪ್ತ ಬಯಕೆಯಿದೆ. ಈ ಆಸೆಯನ್ನು ನೀವು ಪೂರೈಸಿಕೊಟ್ಟರೆ, ನನ್ನ ಮನಸ್ಸಿನ ಬಯಕೆಗಳೆಲ್ಲವೂ ನಿಶ್ಶೇಷವಾಗಿ ಪೂರ್ಣಗೊಳ್ಳುವುವು.'' ನನ್ನ ಬಯಕೆಯೇನೆಂದು ಶ್ರೀಮಾತೆ ತಿಳಿಯಬಯಸಿದರು. ನಾನಂದೆ: ''ನಿಮ್ಮ ನಿಜವಾದ ರೂಪವನ್ನು ನೋಡಬೇಕೆಂಬುದೇ ನನ್ನ ಅಂತಿಮ ಬಯಕೆ.'' ಏನು ಮಾಡಿದರೂ ಶ್ರೀಮಾತೆ ಅದಕ್ಕೆ ಒಪ್ಪಲಿಲ್ಲ. ಅವರನ್ನು ಸಾಕಷ್ಟು ಕಾಡಿ, ಬೇಡಿ ಪ್ರಾರ್ಥಿಸಿಕೊಂಡ ನಂತರ ಅವರು ಹಿಂಜರಿಯುತ್ತಲೇ ಉಳಿದವರಿಗೆಲ್ಲ ಹೇಳಿದರು, ''ನೀವೆಲ್ಲ ಸ್ವಲ್ಪ ಆ ಕಡೆಗೆ ಹೋಗಿ. ಇವನೊಂದಿಗೆ ಸ್ವಲ್ಪ ಮಾತನಾಡಬೇಕು.'' ನನಗೆಂದರು, ''ನೋಡು, ನೀನು ಮಾತ್ರ ನೋಡುತ್ತೀಯ. ಅವರು ಯಾರೂ ನೋಡಲಾರರು. ಆದರೆ ನನ್ನ ನಿಜವಾದ ರೂಪವನ್ನು ನೋಡಿ ಹೆದರಬೇಡ. ಅಲ್ಲದೆ, ನೀನು ಏನನ್ನು ನೋಡುತ್ತೀಯೋ ಅದನ್ನು ನಾನು ಬದುಕಿರುವಲ್ಲಿ ತನಕ ಬೇರೆ ಯಾರಿಗೂ ಹೇಳಬೇಡ.'' ಈ ಮಾತನ್ನು ಹೇಳಿದ ನಂತರ ಶ್ರೀಮಾತೆ ನನ್ನೆದುರು ತಮ್ಮ ನೈಜರೂಪವನ್ನು ಧರಿಸಿ ನಿಂತರು. ಅದು ಜಗದ್ಧಾತ್ರೀ ಮೂರ್ತಿ! ಶ್ರೀಮಾತೆಯವರ ಆ ದಿವ್ಯ ಜ್ಯೋತಿರ್ಮಯ ಮೂರ್ತಿಯನ್ನು ಕಂಡು ನಾನು ಆ ಕ್ಷಣದಲ್ಲೇ ಮರಗಟ್ಟಿ ನಿಂತೆ. ಅವರ ದೇಹದಿಂದ ಜ್ಯೋತಿ ಹೊರಹೊಮ್ಮುತ್ತಿತ್ತು. ನಾಲ್ಕು ದಿಕ್ಕಿಗೂ ಜ್ಯೋತಿಯ ಪ್ರವಾಹ ಹರಿಯುತ್ತಿತ್ತು. ಆ ಜ್ಯೋತಿಯ ತೀಕ್ಷ್ಣ ಪ್ರಭೆಯಿಂದ ನನ್ನ ಕಣ್ಣು ಕುರುಡಾಯಿತು. ಅಷ್ಟರಲ್ಲಿ ನೋಡಿದೆ, ಶ್ರೀಮಾತೆಯವರ ಎರಡೂ ಪಕ್ಕಗಳಲ್ಲಿ ಜಯೆ-ವಿಜಯೆಯರು ಇದ್ದರು. ನನ್ನ ದೇಹವೆಲ್ಲವೂ ಥರಥರನೆ ಕಂಪಿಸಲಾರಂಭಿಸಿತು; ಏನು ಮಾಡಿದರೂ ನಡುಕ ನಿಲ್ಲದೆ ಹೋಯಿತು. ಸ್ಥಿರವಾಗಿ ನಿಲ್ಲಲು ಸಾಧ್ಯವಾಗುತ್ತಿಲ್ಲ. ಶ್ರೀಮಾತೆಯವರ ಪಾದಗಳ ಮೇಲೆ ಕುಸಿದುಬಿದ್ದೆ. ಶ್ರೀಮಾತೆ ತಮ್ಮ ಜಗದ್ಧಾತ್ರೀ ರೂಪವನ್ನು ಮರೆ ಮಾಡಿ, ಮತ್ತೆ ಮಾನವ ರೂಪವನ್ನು ಧರಿಸಿ, ನನ್ನ ದೇಹದ ಮೇಲೆ ಕೈಯಾಡಿಸತೊಡಗಿದರು. ನಿಧಾನವಾಗಿ ನನ್ನ ದೇಹದ ನಡುಕ ನಿಲ್ಲಲಾರಂಭಿಸಿತು. ಸಹಜಾವಸ್ಥೆಗೆ ಬರುತ್ತ ಶ್ರೀಮಾತೆ ಹೇಳಿದರು, ''ಎಲ್ಲಿಯ ತನಕ ನಾನು ಬದುಕಿರುತ್ತೇನೋ, ಅಲ್ಲಿಯವರೆಗೆ ನೀನು ನೋಡಿದ್ದರ ವಿಷಯವಾಗಿ ಯಾರಿಗೂ ಹೇಳಬೇಡ.'' ನಾನು ಶ್ರೀಮಾತೆಯವರನ್ನು ಕೇಳಿದೆ, ಅವರ ಜಯೆ-ವಿಜಯೆಯರು ಯಾರು ಎಂದು. ಅವರೆಂದರು, ''ಗೋಲಾಪ್ ಮತ್ತು ಯೋಗಿನ್.''

ಶ್ರೀಮಾತೆಯವರು ದೇಹತ್ಯಾಗ ಮಾಡಿದ ಬಹಳ ದಿನಗಳ ನಂತರ ರಾಸಬಿಹಾರಿ ಮಹಾರಾಜರಿಂದ (ಸ್ವಾಮಿ ಅರೂಪಾನಂದರು) ಒಂದು ಘಟನೆಯನ್ನು ಕೇಳಿದ್ದೆ. ರಾಸಬಿಹಾರಿ ಮಹಾರಾಜರು ಶ್ರೀಮಾತೆಯವರ ಸೇವಕರಾಗಿದ್ದರು. ಶ್ರೀಮಾತೆಯವರಿಗೆ ಅವರ ಮೇಲೆ ತುಂಬ ಪ್ರೀತಿಯಿತ್ತು. ಜಯರಾಮಬಾಟಿಯಲ್ಲಿ ಒಂದು ದಿನ ರಾಸಬಿಹಾರಿ ಮಹಾರಾಜರು ಆತಂಕದಿಂದ ಹೇಳಿದರು: ''ಅಮ್ಮಾ ನನ್ನ ಜೀವನ ಹೀಗೇ ಮುಗಿದು ಹೋಗುವುದೆ? ಮನೆ ಕಟ್ಟುವ ಕೆಲಸ, ಪೇಟೆಯಿಂದ ಸಾಮಾನು ಖರೀದಿಸುವುದು, ಲೆಕ್ಕಪತ್ರ ಬರೆದಿಡುವುದು ಇವನ್ನೆಲ್ಲ ಮಾಡುತ್ತ, ನನಗೆ ಮುಂದೆ ಏನಾಗುವುದು?'' ಶಾಂತವಾಗಿ ಶ್ರೀಮಾತೆ ಉತ್ತರಿಸಿದರು, ''ಸರಿ, ಮಗೂ. ನೀನು ಇನ್ನೇನು ಮಾಡುವೆ, ಹೇಳು? ಈ ಬಾರಿ ಈ ಕೆಲಸಗಳನ್ನೆಲ್ಲ ಮಾಡುತ್ತಲೇ ಭಗವಂತನ ಸಾಕ್ಷಾತ್ಕಾರ ಹೊಂದುವ ಮಾರ್ಗವನ್ನು ಸ್ವಾಮೀಜಿ ನಿರ್ಮಾಣ ಮಾಡಿದ್ದಾರೆ. ನಿಷ್ಕಾಮಭಾವದಿಂದ, ಇದೆಲ್ಲವೂ ಭಗವಂತನ ಉಪಾಸನೆ ಎಂಬ ಭಾವನೆಯಿಂದ ಈ ಎಲ್ಲ ಕೆಲಸಗಳನ್ನು ಮಾಡಿದರೂ ಸಾಕು, ಮುಕ್ತಿ ದೊರಕುವುದು. ನೀನು ಇನ್ನೇನು ಮಾಡಬೇಕೆಂದಿರುವೆ? ತಪಸ್ಸು ಮಾಡಬೇಕೆಂದಿದ್ದೀಯಾ? ಹಿಮಾಲಯಕ್ಕೆ ಹೋಗಬಯಸುತ್ತೀಯಾ? ಅಲ್ಲಿಗೆ ಹೋದಾಗ ನೋಡುವೆ, ಸಾಧುಗಳು ಒಂದು ಚಪಾತಿಗೋಸ್ಕರ, ಒಂದು ಕಂಬಳಿಗೋಸ್ಕರ ತಮ್ಮತಮ್ಮಲ್ಲೇ ಜಗಳವಾಡುತ್ತಾರೆ! ಪರ್ವತ, ಕಾಡುಗಳಿಗೆ ಹೋಗಿ ಕಣ್ಣುಮುಚ್ಚಿ ಕುಳಿತರೆ ದೇವರು ನಿನ್ನ ಮುಂದೆ ಬಂದು ನಿಂತುಬಿಡುತ್ತಾನೇನು? ಅದಕ್ಕೆ ಹೋಲಿಸಿದರೆ, ನರೇನ್ ಏನೇನು ವ್ಯವಸ್ಥೆ ಮಾಡಿದ್ದಾನೋ ಅದು ಎಷ್ಟೊಂದು ಉತ್ತಮವಾಗಿದೆ! ಎಲ್ಲವೂ ಭಗವಂತನ ಕೆಲಸ, ಅವನ ಸೇವೆ ಎಂದು ಭಾವಿಸಿಕೊಂಡು ಎಲ್ಲ ಕೆಲಸಗಳನ್ನೂ ಮಾಡಬೇಕು. ನೀನು ಏನೇನು ಕೆಲಸಗಳನ್ನು ಮಾಡುತ್ತೀಯೋ ಅದೆಲ್ಲವೂ ನನ್ನ ಕೆಲಸವೇ. ಕೇಳು, ರಾಸಬಿಹಾರಿ, ನನ್ನತ್ತ ನೋಡು.'' ರಾಸಬಿಹಾರಿ ಮಹಾರಾಜ್ ಶ್ರೀಮಾತೆಯವರ ಕಡೆಗೆ ನೋಡಿದಾಗ, ಅದೇ ಸಾಮಾನ್ಯ ವೃದ್ಧ ಮಹಿಳೆ, ಅಲ್ಲಿಯತನಕ ಇದನ್ನೆಲ್ಲ ಹೇಳುತ್ತಿದ್ದ ಜಾಗದಲ್ಲಿ ಒಬ್ಬಾಕೆ ಜ್ಯೋತಿರ್ಮಯ ದೇವಿಯ ಮೂರ್ತಿ ಕುಳಿತಿದ್ದುದನ್ನು

ಕಂಡರು. ನಾಲ್ಕೂ ದಿಕ್ಕುಗಳಲ್ಲಿ ಅವರ ಕಡೆಯಿಂದ ಹೊರ ಹೊಮ್ಮುವ ಜ್ಯೋತಿಯ ಪ್ರವಾಹವೇ ಹರಿಯುತ್ತಿತ್ತು. ರಾಸ ಬಿಹಾರಿ ಮಹಾರಾಜರಿಗೆ ಅವರ ಕಡೆಗೆ ನೋಡಲಾಗಲಿಲ್ಲ. ಭಯ, ವಿಸ್ಮಯಗಳಿಂದ ಅವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಕೂಡಲೇ ಶ್ರೀಮಾತೆಯವರ ಅದೇ ಪರಿಚಿತ ಧ್ವನಿಯನ್ನು ಕೇಳಿದರು: ''ಇದೇನು ರಾಸಬಿಹಾರಿ, ನಿನಗೇನಾಯಿತು? ಕಣ್ಣುಗಳನ್ನು ಏಕೆ ಮುಚ್ಚಿಕೊಂಡೆ? ನೋಡು, ನನ್ನತ್ತ ನೋಡು.'' ಆಗ ರಾಸಬಿಹಾರಿ ಮಹಾರಾಜರು ಕಣ್ತೆರೆದು ನೋಡಿದರು, ಅದೇ ಹಿಂದಿನ ಶ್ರೀಮಾತೆ ತಮ್ಮ ಅತ್ಯಂತ ಪರಿಚಿತವಾದ ಮುಖಮುದ್ರೆ ಧರಿಸಿ ಅಲ್ಲಿ ಕುಳಿತಿದ್ದರು. ಅವರ ಮುಖದಲ್ಲಿ ಅದೇ ಚಿರಪರಿಚಿತವಾದ ಸುಮಧುರ ನಗು!

ಶ್ರೀಮಾತೆಯವರು ನನಗೆ ಬರೆದ ಪತ್ರಗಳನ್ನು[೩] ನಾನು ತುಂಬ ಶ್ರಮವಹಿಸಿ ತೆಗೆದಿಟ್ಟಿದ್ದೇನೆ. ಅವು ಸಾಮಾನ್ಯ ಪತ್ರಗಳು; ಆದರೆ ಅವುಗಳ ಸಾಲು ಸಾಲುಗಳಲ್ಲಿಯೂ ಶ್ರೀಮಾತೆಯವರ ಅಸೀಮ ಪ್ರೀತಿ ತುಂಬಿಕೊಂಡಿದೆ. ಒಂದು ಪತ್ರದಲ್ಲಿ ಶ್ರೀಮಾತೆ ನನಗೆ ಹೀಗೆ ಬರೆದಿದ್ದಾರೆ: ''ಶ್ರೀರಾಮಕೃಷ್ಣರು ಏನು ಮಾಡುವರೋ ಅದೆಲ್ಲವೂ ನಿಮ್ಮ ಒಳ್ಳೆಯದಕ್ಕಾಗಿ. ಆದರೂ ನೀನು ಸತ್ಯಪಥದಲ್ಲಿಯೇ ನಡೆ.'' ನನ್ನ ಜೀವನದಲ್ಲಿ ಅನೇಕ ವಿಪತ್ತುಗಳು, ಸಂಕಟದ ಸಂದರ್ಭಗಳು ಬಂದೊದಗಿವೆ; ಆ ಸಮಯದಲ್ಲೆಲ್ಲ ಶ್ರೀಮಾತೆಯವರ ಮಾತುಗಳನ್ನು ನೆನಪಿಸಿಕೊಳ್ಳಲು ಪ್ರಯತ್ನಿಸಿದ್ದೇನೆ; ಎಷ್ಟು ಸಾಧ್ಯವೋ ಅಷ್ಟನ್ನು ಪಾಲನೆ ಮಾಡಲು ಯತ್ನಿಸಿದ್ದೇನೆ. ನನ್ನ ತಂದೆಯ ಕೊನೆಯ ದಿನಗಳಲ್ಲಿ ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ತಂದೆಗೆ ಅನಾರೋಗ್ಯವೆಂದು ಅವರಿಗೆ ತಿಳಿಸಿದ್ದೆ. ಶ್ರೀಮಾತೆಯವರ ನಿರ್ದೇಶನದಂತೆಯೇ ನಾನು ತಂದೆಯವರನ್ನು ಹಳ್ಳಿಯಿಂದ ಚಿಕಿತ್ಸೆಗಾಗಿ ಕಲ್ಕತ್ತೆಗೆ ಕರೆದುಕೊಂಡು ಬಂದಿದ್ದೆ. ತಂದೆಗೆ ಕ್ಯಾನ್ಸರ್ ಆಗಿತ್ತು. ಶರತ್ ಮಹಾರಾಜರು ವ್ಯವಸ್ಥೆ ಮಾಡಿ, ಕಲ್ಕತ್ತೆಯ ಪ್ರಸಿದ್ಧ ಡಾಕ್ಟರ್‌ಗಳಿಗೆ ತೋರಿಸಲಾಗಿತ್ತು. ತಂದೆ ತೀರಿಕೊಂಡಾಗ ಶ್ರೀಮಾತೆಯವರಿಗೆ ಪತ್ರ ಬರೆದು ವಿಷಯ ತಿಳಿಸಿದ್ದೆ. ಅದಕ್ಕೆ ಉತ್ತರವಾಗಿ ಶ್ರೀಮಾತೆ ಬರೆದಿದ್ದರು (ಏಪ್ರಿಲ್, ೧೯೧೯): ''ನಿನ್ನ ಪತ್ರದಿಂದ ನಿನ್ನ ತಂದೆಯವರು ತೀರಿಕೊಂಡ ವಿಷಯವನ್ನು ತಿಳಿದು ಸಂತಸವಾಯಿತು — ಏಕೆಂದರೆ, ಮುದಿವಯಸ್ಸಿನಲ್ಲಿ ನಿನ್ನ ತಂದೆ ನಿಮ್ಮನ್ನೆಲ್ಲ ಇಲ್ಲೇ ಬಿಟ್ಟು ಗಂಗೆಯನ್ನು ಸೇರಿಕೊಂಡರು[೪]; ಅದಕ್ಕಾಗಿ.'' ತಂದೆಯವರ ಮರಣದಿಂದಾಗಿ ನಾನು ಭಗ್ನಹೃದಯದಿಂದ ದುಃಖಿತನಾಗಿದ್ದೆ. ಆದರೆ ಶ್ರೀಮಾತೆಯವರ ಪತ್ರವನ್ನು ಪಡೆದ ಮೇಲೆ ನನ್ನ ದುಃಖವೆಲ್ಲವೂ ಒಂದೇ ಕ್ಷಣದಲ್ಲಿ ಎಲ್ಲಿಗೋ ಹೊರಟುಹೋಯಿತು.

ಒಂದು ಸಲ ಪದ್ಮಾನದಿಯ (ಗಂಗಾ, ಬ್ರಹ್ಮಪುತ್ರ ನದಿಗಳು ಸೇರಿ ಪದ್ಮಾ ನದಿಯೆಂದು ಕರೆಯಲ್ಪಡುತ್ತದೆ; ಅದು ಈಗಿನ ಬಾಂಗ್ಲಾದೇಶದಲ್ಲಿ ಹರಿಯುತ್ತಿದೆ.) ನೆರೆಯಲ್ಲಿ ನಮ್ಮ ಮನೆಯೆಲ್ಲ ಮುಳುಗಿಹೋಯಿತು. ಕಲ್ಕತ್ತೆಗೆ ಈ ವಾರ್ತೆ ಬಂದು ತಲುಪಿತು.

ನನ್ನ ತಂದೆ, ತಾಯಿ, ಪತ್ನಿ, ಮಕ್ಕಳು ಇತ್ಯಾದಿಯಾಗಿ ನನ್ನ ಕುಟುಂಬವಿಡೀ ನಿರಾಶ್ರಿತವಾಯಿತು. ಯಾರಿಗೆ ಹೇಳಲಿ, ಏನು ಮಾಡಲಿ ಏನೊಂದೂ ಗೊತ್ತಾಗದೆ, ಏನನ್ನೂ ನಿರ್ಧಾರಿಸಲಾಗದೆ ಹೋದೆ. 'ಉದ್ಬೋಧನ'ದಲ್ಲಿ ಪ್ರತಿದಿನ ಎಷ್ಟು ಖರ್ಚು ಬೀಳುವುದು ಎಂದು ನನಗೆ ತುಸು ತಿಳಿದಿತ್ತು. ಸಾಕ್ಷಾತ್ ಅನ್ನಪೂರ್ಣೆಯೇ ಆಗಿರುವ ಶ್ರೀಮಾತೆಯವರ ಕೃಪೆಯಿಂದ ಅಲ್ಲಿ ಯಾವುದಕ್ಕೂ ಅಭಾವವಿರಲಿಲ್ಲ. ಆದರೆ, ಭಕ್ತರ ದಾನ ಹಾಗೂ ದೇಣಿಗೆಗಳಿಂದಲೇ ಶ್ರೀಮಾತೆಯವರ ಸಂಸಾರ ನಡೆಯುತ್ತಿತ್ತು. ಆದ್ದರಿಂದ ಶ್ರೀಮಾತೆಯವರಿಗಾಗಲಿ, ಶರತ್ ಮಹಾರಾಜರಿಗಾಗಲಿ ನನ್ನ ದುರ್ದೈವದ ಸಂಗತಿಯನ್ನು ಹೇಳಲು ನನಗೆ ಸಂಕೋಚವುಂಟಾಗಿ, ಯಾರಿಗೂ ಏನೂ ಹೇಳಲಾಗಲಿಲ್ಲ. ಇದನ್ನು ಕುರಿತು ಚಿಂತಿಸುತ್ತ ನನಗೆ ರಾತ್ರಿ ನಿದ್ದೆಯಿಲ್ಲವಾಯಿತು, ಊಟ-ತಿಂಡಿಗಳಲ್ಲಿ ಮನಸ್ಸಿಲ್ಲದೆ ಹೋಯಿತು. ಆದರೆ ಅಂತರ್ಯಾಮಿನಿ ಶ್ರೀಮಾತೆಯವರು ಇದರ ಸುಳಿವನ್ನು ಹೊಂದಿದ್ದರು. ಒಂದು ದಿನ ಅವರು ನನ್ನನ್ನು ಕರೆದು ತುಂಬಾ ಪ್ರೀತಿ, ವಾತ್ಸಲ್ಯಗಳಿಂದ ಕೂಡಿದ ಧ್ವನಿಯಿಂದ ಕೇಳಿದರು, ''ಚಂದು, ಯಾರಿಗೂ ತಮ್ಮತಮ್ಮ ವಿಧಿಯ ಮೇಲೆ ಹಿಡಿತವಿರುವುದಿಲ್ಲ. ನೋಡು. ಇಷ್ಟಕ್ಕೇ ನೀನು ಧೈರ್ಯಗೆಡಬೇಡ. ನೀನು ಒಂದು ಸಲ ನಿನ್ನ ಊರಿಗೆ ಹೋಗಿ, ಅವರಿಗೆಲ್ಲಾ ಏನಾದರೂ ವ್ಯವಸ್ಥೆ ಮಾಡಿ ಬಾ. ಇಷ್ಟೊಂದು ಚಿಂತೆ ಮಾಡಿದರೆ ಅದರಿಂದೇನು ಲಾಭ? ಊಟ, ತಿಂಡಿ ಇವನ್ನೆಲ್ಲ ಏಕೆ ಬಿಟ್ಟುಬಿಟ್ಟಿದ್ದೀಯಾ?'' ಶ್ರೀಮಾತೆಯವರ ಮಾತುಗಳನ್ನು ಕೇಳಿ ನನ್ನ ಕಣ್ಣುಗಳಲ್ಲಿ ನೀರು ಉಕ್ಕಿಬಂತು. ನಾನಂದೆ: ''ಆದರೆ, ಅಮ್ಮಾ — ಅಲ್ಲಿಗೆ ಹೋಗಿ ನಾನೇನು ಮಾಡಲಿ? ಮನೆ ಇತ್ಯಾದಿ, ಎಲ್ಲವೂ ನೆರೆಯಲ್ಲಿ ಕೊಚ್ಚಿಕೊಂಡು ಹೋಗಿವೆ. ಅದಕ್ಕೆಲ್ಲ ವ್ಯವಸ್ಥೆ ಮಾಡಬೇಕಾದರೆ ತುಂಬಾ ಹಣ ಬೇಕಾಗಬಹುದು. ಅದಲ್ಲದೆ, ಅಲ್ಲಿ ಹೋಗಿ ಬರುವ ಖರ್ಚಿಗೆ ಕೂಡ ಹಣ ನನ್ನಲ್ಲಿಲ್ಲ.'' ಕರುಣಾಮಯಿ ಮಾತೆ ಶಾಂತಭಾವದಿಂದ ಹೇಳಿದರು, ''ನನಗೆಲ್ಲವೂ ಗೊತ್ತು. ನೀನು ಈ ಹಣವನ್ನು ತೆಗೆದುಕೊಂಡು ಮನೆಗೆ ಹೋಗು. ಇದು ನನ್ನ ಬಳಿ ಇತ್ತು. ನಿನ್ನ ದಾರಿಖರ್ಚು, ಮನೆ ನಿರ್ಮಾಣ ಮಾಡುವ ಖರ್ಚು ಎಲ್ಲದಕ್ಕೂ ಇದು ಸಾಕಾಗಬಹುದು. ಆದರೂ ನಾನು ಈ ಹಣವನ್ನು ನಿನಗೆ ಕೊಟ್ಟ ವಿಚಾರ ಯಾರಿಗೂ ಹೇಳಬೇಡ. ಯಾರಾದರೂ ಕೇಳಿದರೆ ಹೇಳು, 'ಪ್ರವಾಹ ಬಂದು ಮನೆ ಕೊಚ್ಚಿಕೊಂಡು ಹೋಗಿದೆ.

೩ ಶ್ರೀಮಾತೆಯವರು ಆಶ್ವಯುಜ ೧೩೬೪ ಹಾಗೂ ಪೌಷ ೧೩೬೪ (ಬಂಗಾಳ ವರ್ಷ) – ಈ ಸಮಯದಲ್ಲಿ ಚಂದ್ರಮೋಹನ ದತ್ತರಿಗೆ ಬರೆದ ಪತ್ರಗಳು ಪ್ರಕಟವಾಗಿವೆ. *(–ಸಂ)*

೪ ಮರಣದ ನಂತರ ಅಂತ್ಯಕ್ರಿಯೆ ಮುಗಿದು, ಅವರ ಚಿತಾಭಸ್ಮವನ್ನು ಗಂಗೆಯಲ್ಲಿ ವಿಸರ್ಜನೆ ಮಾಡಲಾಯಿತು. *(–ಸಂ)*

ಸುದ್ದಿ ಬಂತು, ಅದಕ್ಕಾಗಿ ಹೋಗುತ್ತಿದ್ದೇನೆ' ಅಂತ.'' ಹೀಗೆ ಹೇಳಿದ ಅವರು ತಮ್ಮ ಸೆರಗಿನ ತುದಿಯಲ್ಲಿ ಕಟ್ಟಿಕೊಂಡಿದ್ದ ನೋಟಿನ ಕಟ್ಟುಗಳನ್ನು ನನ್ನ ಕೈಗೆ ಕೊಟ್ಟರು. ಈ ರೀತಿಯಲ್ಲಿ ಶ್ರೀಮಾತೆಯವರ ಪ್ರೀತಿಯ ಪರಿಚಯ ನನ್ನ ಜೀವನದಲ್ಲಿ ಎಷ್ಟು ಬಾರಿ ನಡೆದಿತ್ತೋ ಅದನ್ನು ಎಣಿಸಲಾಗದು. ಕೇವಲ ನಾನಷ್ಟೇ ಏಕೆ, ಇನ್ನೂ ಎಷ್ಟೋ ಜನರಿಗೆ ಶ್ರೀಮಾತೆ ಗುಟ್ಟಾಗಿ ಈ ರೀತಿ ತಮ್ಮ ಪ್ರೀತಿ ಹಾಗೂ ಕೃಪೆಯನ್ನು ವಿತರಣೆ ಮಾಡಿದ್ದಾರೆ. ಈ ಬಗ್ಗೆ ನಾವು ಅನಂತರ ತಿಳಿದುಕೊಂಡೆವು.

ಒಂದು ದಿನ ನಾನು ದೇವವ್ರತ ಮಹಾರಾಜರೊಂದಿಗೆ (ಸ್ವಾಮಿ ಪ್ರಜ್ಞಾನಂದರು) ಗಂಗಾಸ್ನಾನ ಮಾಡಲು ಹೋಗುತ್ತಿದ್ದೆ. ಸುಧೀರ್ ಮಹಾರಾಜ್ (ಸ್ವಾಮಿ ಶುದ್ಧಾನಂದರು) ಹಠಾತ್ತನೆ ನನಗೆ ಹೇಳಿದರು: ''ಚಂದ್ರ, ನೀನು ಯಾವಾಗ ಬೇಕಾದರೂ ಶ್ರೀಮಾತೆಯವರ ಬಳಿಗೆ ಹೋಗಬಲ್ಲೆ, ಶ್ರೀಮಾತೆ ಕೂಡ ನಿನ್ನ ಮೇಲೆ ತುಂಬಾ ಪ್ರೀತಿಯನ್ನು ಹೊಂದಿದ್ದಾರೆ. ನಾನೊಂದು ವಿಷಯ ಹೇಳುತ್ತೇನೆ ಅದನ್ನು ನೀನು ಶ್ರೀಮಾತೆಯವರಿಗೆ ಹೇಳಬಲ್ಲೆಯಾ?'' ನಾನಂದೆ: ''ಖಂಡಿತವಾಗಿ ಏನು ಹೇಳಬೇಕು, ತಿಳಿಸಿ.'' ಅದಕ್ಕೆ ಸುಧೀರ್ ಮಹಾರಾಜ್, ''ಹೆಚ್ಚೇನೂ ಇಲ್ಲ — ಸಣ್ಣ ಒಂದು ಮಾತು ಅಷ್ಟೆ. ಶ್ರೀಮಾತೆಯವರ ಬಳಿಗೆ ಹೋಗಿ, 'ಅಮ್ಮಾ ನನಗೆ ಮುಕ್ತಿ ಬೇಕು' ಅಂತ ಕೇಳುತ್ತೀಯಾ?'' ನಾನಂದೆ, ''ಈಗಲೇ ಹೋಗಿ ಕೇಳಿ ಬರುತ್ತೇನೆ.'' ನಾನು ಓಡುತ್ತಾ ಮೇಲಂತಸ್ತಿಗೆ ಹೋಗಿ, ಶ್ರೀಮಾತೆಯವರ ಕೋಣೆಯನ್ನು ತಲುಪಿದೆ. ಅಲ್ಲಿ ಶ್ರೀಮಾತೆ ಪೂಜೆ ಮಾಡುತ್ತಿದ್ದರು. ಎಷ್ಟೋ ಬಾರಿ ಅವರ ಕೋಣೆಗೆ ಹೋಗಿದ್ದೆ; ಆದರೆ ಇಂದು ಪೂಜೆಯಲ್ಲಿ ನಿರತರಾಗಿದ್ದ ಶ್ರೀಮಾತೆಯವರನ್ನು ಕಂಡು ಅತ್ಯಂತ ಭಯವಾಗತೊಡಗಿತು. ನನ್ನ ಇಡೀ ದೇಹ ನಡುಗಲಾರಂಭಿಸಿತು. ಕೋಣೆಯಿಂದ ಹೊರಗೆ ಬಂದುಬಿಡಲೇ ಎಂದು ಯೋಚಿಸಿದೆ, ಆದರೆ ಹಾಗೆ ಮಾಡಲು ನನ್ನ ದೇಹದಲ್ಲಿ ಶಕ್ತಿಯೇ ಇಲ್ಲದಾಗಿದೆ. ನನ್ನ ಕಾಲುಗಳು ಗಡಗಡನೆ ನಡುಗುತ್ತಿವೆ. ಗಂಟಲು ಒಣಗಿ ಮರಗಟ್ಟಿಹೋಗಿದೆ; ನಾನು ಬೆವೆತುಬಿಟ್ಟಿದ್ದೆ. ಇದ್ದಕ್ಕಿದ್ದಂತೆ ಶ್ರೀಮಾತೆ ನನ್ನ ಕಡೆಗೆ ತಿರುಗಿ ನೋಡಿದರು. ಸನ್ನೆಮಾಡಿ ಕೇಳಿದರು, ''ಏನಾದರೂ ಹೇಳಬೇಕೆಂದಿದ್ದೀಯಾ?'' ನನ್ನ ಕಂಠದಿಂದ ಸ್ವರ ಹೊರಡುತ್ತಿಲ್ಲ. ಮತ್ತೆ ಶ್ರೀಮಾತೆ ಸನ್ನೆ ಮಾಡುತ್ತ, ''ಏನಾದರೂ ಹೇಳುವುದಕ್ಕಾಗಿ ಬಂದಿದ್ದೀಯೇನು?'' ಎಂದು ಕೇಳಿದರು. ನನಗರಿವಿಲ್ಲದೆ ನನ್ನ ಬಾಯಿಯಿಂದ 'ಪ್ರಸಾದ' ಎಂಬ ಶಬ್ದ ಮಾತ್ರ ಹೊರಬಂತು. ಶ್ರೀಮಾತೆಯವರು ಅಲ್ಲೇ ಮಂಚದ ಕೆಳಗೆ ಇರಿಸಿದ್ದ ಒಂದು ತಟ್ಟೆಯಲ್ಲಿದ್ದ ಪ್ರಸಾದದ ಕಡೆಗೆ ಬೆರಳಿನಿಂದ ತೋರಿಸಿದರು. ಅನಂತರ ಅವರು ಪೂಜೆಯನ್ನು ಮುಂದುವರಿಸಿದರು. ನಡುಗುತ್ತಾ, ಬೆವರಿಳಿಸುತ್ತಾ ನಾನು ಪ್ರಸಾದದೊಂದಿಗೆ ಕೆಳಅಂತಸ್ತಿಗೆ ಓಡೋಡಿ ಬಂದುಬಿಟ್ಟೆ; ಅಲ್ಲಿ ಸುಧೀರ್ ಮಹಾರಾಜ್ ಹಾಗೂ ದೇವವ್ರತ ಮಹಾರಾಜ್ ಅತ್ಯಂತ ಕಾತರರಾಗಿ ನನ್ನಗೋಸ್ಕರ ಕಾದು ನಿಂತಿದ್ದರು. ಅವರು ಕೇಳಿದರು, ''ಏನು ಚಂದ್ರ, ಕೇಳಿದೆಯಾ? ಶ್ರೀಮಾತೆ ಏನು ಹೇಳಿದರು?'' ನಾನು ನಡುಗುತ್ತಾ ನಡೆದುದನ್ನೆಲ್ಲಾ ಅವರಿಗೆ ತಿಳಿಸಿದೆ. ಅನಂತರ ಗಂಗಾಸ್ನಾನಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಅಂದು ನನಗೆ ಸಹಜಾವಸ್ಥೆಗೆ ಮರಳಲು ತುಂಬ ಸಮಯ ಹಿಡಿಯಿತು.

ನನ್ನ ಜೀವನದಲ್ಲಿ ಎಲ್ಲಕ್ಕಿಂತ ಹೆಚ್ಚಿನ ವಿಷಾದದ ಸಂಗತಿಯೆಂದರೆ — ಶ್ರೀಮಾತೆಯವರ ಒಂದು ಆದೇಶವನ್ನು ನನಗೆ ಪಾಲಿಸಲು ಸಾಧ್ಯವಾಗಲಿಲ್ಲ ಎಂಬುದು. ನನ್ನ ಮೊದಲ ಮಗು*, — ದೊಡ್ಡ ಮಗಳು ಇಂದುವಿಗೆ (ಶ್ರೀಮಾತೆ ಅವಳನ್ನು ಪ್ರೀತಿಯಿಂದ 'ಬಡೋ ಖುಕಿ' ಎಂದು ಕರೆಯುತ್ತಿದ್ದರು — ಅಂದರೆ 'ದೊಡ್ಡ ಮಗಳು' ಎಂದರ್ಥ. ನನ್ನ ತಮ್ಮ ಲಾಲಮೋಹನನ ಮಗಳು ರಾಣಿಯನ್ನು ಅವರು 'ಛೋಟೋ ಖುಕಿ', ಅಂದರೆ, 'ಚಿಕ್ಕ ಮಗಳು' ಎಂದು ಕರೆಯುತ್ತಿದ್ದರು) ಮದುವೆ ಮಾಡಬಾರದು ಎಂದು ಶ್ರೀಮಾತೆ ನಿಷೇಧಿಸಿದ್ದರು. ಆಗ ಇಂದು ನಿವೇದಿತಾ ಶಾಲೆಯಲ್ಲಿ ಏಳನೇ ತರಗತಿ ಓದುತ್ತಿದ್ದಳು. ಅವಳಿಗೆ ಆಗ ೧೫ ವರ್ಷ ವಯಸ್ಸು. ನಮ್ಮ ಕುಟುಂಬಕ್ಕೆ ಸಮಾನ ದರ್ಜೆಯ ಕುಟುಂಬದಲ್ಲಿ ಒಬ್ಬ ಒಳ್ಳೆಯ ಹುಡುಗನಿದ್ದಾನೆಂದು ನನ್ನ ತಂದೆ, ದೊಡ್ಡ ಅಣ್ಣ, ದೊಡ್ಡ ಅಕ್ಕ, ಸಣ್ಣ ಅಣ್ಣ ಹಾಗೂ ಇನ್ನಿತರರು ಇಂದುವನ್ನು ಅವನಿಗೆ ವಿವಾಹ ಮಾಡಿಕೊಡಲು ಒತ್ತಾಯಿಸಿದರು. ನಾನು ಪ್ರತಿಯೊಂದನ್ನೂ ಶ್ರೀಮಾತೆಯವರನ್ನು ಕೇಳಿಯೇ ಮಾಡುತ್ತಿದ್ದೆ. ಈಗ ಇಂದುವಿನ ಮದುವೆಯ ವಿಷಯ ಬಂದಾಗ, ಶ್ರೀಮಾತೆಯವರ ಬಳಿಗೆ ಹೋಗಿ ಅವರನ್ನು ಕೇಳಿದೆ. ಶ್ರೀಮಾತೆ ನೇರವಾಗಿ ಹೇಳಿದರು, ''ಚಂದು, ದೊಡ್ಡ ಮಗಳಿಗೆ ಮದುವೆ ಮಾಡಬೇಡ, ಅವಳು ಓದುಬರಹ ಕಲಿಯಲಿ. ಅವಳು ಹೇಗೆ ನಿವೇದಿತಾ ಶಾಲೆಯಲ್ಲಿ ಕಲಿಯುತ್ತಿದ್ದಾಳೋ, ಹಾಗೆಯೇ ಕಲಿಯಲಿ.'' ನಾನು ಮನೆಗೆ ಮರಳಿ ಬಂದು, ಶ್ರೀಮಾತೆಯವರ ಆದೇಶವನ್ನು ಎಲ್ಲರಿಗೂ ತಿಳಿಸಿದೆ. ಆಗ ನನ್ನ ತಂದೆ ಹಾಗೂ ಇತರರೆಲ್ಲ ಹೇಳಿದರು, ''ಅದು ಹೇಗಾದೀತು? ಹುಡುಗಿ ಮದುವೆಯ ವಯಸ್ಸಿಗೆ ಬಂದಿದ್ದಾಳೆ. ಈಗ ಅವಳಿಗೆ ಮದುವೆ ಮಾಡಿಸದಿದ್ದರೆ ಜನ ನಮ್ಮನ್ನು ದೂಷಿಸುತ್ತಾರೆ. ಇಷ್ಟು ದೊಡ್ಡವಳಾದ ಅವಿವಾಹಿತ ಹುಡುಗಿಯನ್ನು ಶಾಲೆಗೆ ಕಳುಹಿಸಿದರೆ ಜನ ಇನ್ನೇನು ಹೇಳಲಾರರು? ಸಮಾಜ ಏನು ಹೇಳೀತು?'' ಎಂದರು. ನಾನು ಮತ್ತೆ ಶ್ರೀಮಾತೆಯವರ ಬಳಿಗೆ ಹೋಗಿ ಅವರ ಮಾತುಗಳನ್ನೆಲ್ಲ ತಿಳಿಸಿದೆ. ಅದಕ್ಕೆ ಶ್ರೀಮಾತೆ, ''ಅವರು ಮದುವೆ ಮಾಡಿದರೆ ಅದರಿಂದ ಒಳ್ಳೆಯದಾಗದು. ಅವಳಂತೂ ಚೆನ್ನಾಗಿ ಓದುತ್ತಿದ್ದಾಳೆ, ಓದಲಿ ಬಿಡು'' ಎಂದರು. ಮನೆಗೆ ಮರಳಿದ ನಾನು ಎಲ್ಲರಿಗೂ ಶ್ರೀಮಾತೆಯವರು ಹೇಳಿದ್ದನ್ನು ತಿಳಿಸಿದೆ. ಆದರೂ ಅವರು ಶ್ರೀಮಾತೆಯವರ ಮಾತಿಗೆ ಮಹತ್ವ ನೀಡಲಿಲ್ಲ. ''ವಿಧಿಯ ವಿಧಾನವನ್ನು ಯಾರಿಗೂ ಖಂಡಿಸಲಾಗದು. ಒಂದು ವೇಳೆ

---

* ನಿಜವಾಗಿ ಎರಡನೇ ಮಗು. ಮೊದಲ ಮಗು ಹುಟ್ಟಿದ ಕೆಲವೇ ತಿಂಗಳಲ್ಲಿ ಸತ್ತುಹೋಯಿತು. ಮಾಹಿತಿ: ಕಾರ್ತಿಕಚಂದ್ರ ದತ್ತ *(–ಸಂ)*

ಅವಳ ಪಾಲಿಗೆ ಕಷ್ಟ ಬರುವುದಿದ್ದರೆ ನಾವು ಏನು ಮಾಡಬಲ್ಲೆವು? ಆದರೆ ಇಷ್ಟು ಒಳ್ಳೆಯ ಸಂಬಂಧ ಕೈತಪ್ಪಿ ಹೋದರೆ, ಅನಂತರ ಪಶ್ಚಾತ್ತಾಪ ಪಡಬೇಕಾದೀತು. 'ಜನ್ಮ-ಮೃತ್ಯು-ವಿವಾಹ ಇವನ್ನು ವಿಧಿಯೇ ನಿರ್ಣಯಿಸುತ್ತಾನೆ.' ನಾನು, ನೀನು ಎಲ್ಲ ಅಷ್ಟಕ್ಕೂ ಯಾರು? ನಾವೆಲ್ಲರೂ ವಿಧಿಯ ನಿಯಮಕ್ಕೆ ಬದ್ಧರು. ಹುಡುಗಿಯ ಹಣೆಯಲ್ಲಿ ಸುಖವೆಂದು ಬರೆದಿದ್ದರೆ ಅವಳಿಗೆ ಸುಖವಾಗುವುದು. ದುಃಖವೇ ಬರೆದಿದ್ದರೆ ದುಃಖವೇ ಬಂದೊದಗುವುದು. ಹಣೆಬರಹ ಏನಿದೆಯೋ ಅದೇ ಆಗುವುದು. ವಿಧಿಯನ್ನು ಯಾರು ಖಂಡಿಸಬಲ್ಲರು? ಹುಡುಗಿಗೆ ೧೫ ವರ್ಷ ವಯಸ್ಸಾಗಿದೆ; ಇಷ್ಟು ದಿನ ಮದುವೆ ಮಾಡದೆ ಇಟ್ಟಿದ್ದೇವೆ, ಅಷ್ಟರಿಂದಲೇ ನಿನ್ನ ಕಡೆಯಿಂದ ಬೇಕಾದಷ್ಟು ಅನ್ಯಾಯವಾಗಿದೆ. ಮದುವೆ ಮಾಡಿಸದೆ, ಅವಿವಾಹಿತ ಸುಂದರಿ ಹುಡುಗಿಯನ್ನು ಮನೆಯಲ್ಲಿಟ್ಟುಕೊಂಡರೆ, ಮುಂದೆ ಏನಾದರೂ ಅಹಿತಕರ ಘಟನೆ ನಡೆದು ಬಿಟ್ಟರೆ, ಆಗ ನೀನೇನು ಮಾಡುವೆ?'' ಎಂದರು. ಅವರ ಮಾತುಗಳನ್ನು ಕೇಳಿ ನಾನು ಬಹಳ ಗೊಂದಲಕ್ಕೊಳಗಾದೆ. ಒಂದು ಕಡೆ ಗುರು ನಿಷೇಧ ಮಾಡಿದ್ದಾರೆ — ನನ್ನ ಇಷ್ಟದೇವತೆ ಕೂಡ ಅವರೇ ಆಗಿದ್ದಾರೆ. ಜನನ-ಮರಣಗಳಿಂದ ನನಗೆ ಮುಕ್ತಿ ಅವರೇ ಆಗಿದ್ದಾರೆ. ಇನ್ನೊಂದೆಡೆ ತಂದೆ, ಚಿಕ್ಕಪ್ಪ, ಅಕ್ಕ, ಅಣ್ಣ ಮುಂತಾದ ಸಂಬಂಧಿಕರ ಉರಿಗಣ್ಣು. ಕೊನೆಗೆ ಅವರ ಒತ್ತಡಕ್ಕೆ ಮಣಿದು, ಮಗಳ ಭವಿಷ್ಯವನ್ನು ವಿಧಿಯ ಕೈಗೊಪ್ಪಿಸಿದೆ. ಇಲ್ಲೇ ನಾನು ಬಹಳ ದೊಡ್ಡ ತಪ್ಪನ್ನು ಮಾಡಿದೆ. ಅದರ ಫಲವಾಗಿ ನಾನು ಇಂದಿಗೂ ಅದಕ್ಕಾಗಿ ಕೊರಗುತ್ತಿದ್ದೇನೆ. ಮದುವೆಯಾದ ಕೆಲವು ವರ್ಷಗಳಲ್ಲೇ ನನ್ನ ಮಗಳು ವಿಧವೆಯಾದಳು.

ತಕ್ಕಡಿಯ ಒಂದೆಡೆ ಗುರುವನ್ನು ಕುಳ್ಳಿರಿಸಿ, ಇನ್ನೊಂದೆಡೆ ಇಡೀ ಪ್ರಪಂಚವನ್ನೇ ಇರಿಸಿದರೂ, ಅದು ಗುರುವಿಗೆ ಸಮಾನವಾಗಲಾರದು! ನನ್ನ ಗುರು ಸ್ವಯಂ ಜಗನ್ಮಾತೆ, ಅವರೇ ನನ್ನ ಇಷ್ಟದೇವತೆ. ಅವರ ಆದೇಶವನ್ನು ಪಾಲಿಸದೆ, ನಾನು ಇಂದಿಗೂ ಅದರ ಫಲವನ್ನು ಅನುಭವಿಸುತ್ತಿದ್ದೇನೆ. ನನ್ನ ಮಗಳು ತನ್ನ ನಾಲ್ಕು ವರ್ಷದ ಮಗಳು ಹಾಗೂ ಒಂಬತ್ತು ತಿಂಗಳ ಮಗನನ್ನು ಕರೆದುಕೊಂಡು ನನ್ನ ಮನೆಗೆ ಬಂದುಬಿಟ್ಟಳು.

ಕೊನೆಗೂ ೧೯೨೦ರ ಜುಲೈ ೨೧ ನೇ ತಾರೀಕಿನ ಆ ದಿನ ಬಂದೇಬಿಟ್ಟಿತು. ಶ್ರೀಮಾತೆ ಎಲ್ಲರನ್ನೂ ಕಣ್ಣೀರಿನಲ್ಲಿ ಮುಳುಗಿಸಿ ಶ್ರೀರಾಮಕೃಷ್ಣ ಲೋಕಕ್ಕೆ ಚಿರಕಾಲವೂ ಇರಲು ಹೋಗಿಬಿಟ್ಟರು. ಶ್ರೀಮಾತೆಯವರಿಗೆ ಮೃತ್ಯುವೆಂಬುದು ಇಲ್ಲವೆಂಬುದನ್ನು ಅವರ ಮಕ್ಕಳೆಲ್ಲರೂ ಬಲ್ಲರು; ಅದೃಶ್ಯಲೋಕದಿಂದ ಅವರು ತಮ್ಮ ಮಕ್ಕಳಿಗೆ ಎಂದೆಂದಿಗೂ ಒಳಿತಾಗಲಿ ಎಂದೇ ಬಯಸುವರು — ಇದನ್ನು ಅವರೆಲ್ಲ ಬಲ್ಲರು. ಆದರೆ ಪ್ರೇಮಮಯಿ ತಾಯಿಯನ್ನು ಅವರು ತಮ್ಮ ಕಣ್ಣಿನಿಂದ ದೇಹಧಾರಿಯಾಗಿ ಮಾತ್ರ ನೋಡಲಾರರು. ನೆರೆ ಕಟ್ಟೆಯೊಡೆದು ಹರಿಯುವಂತೆ ಭಕ್ತರ ಕೆನ್ನೆಗಳಲ್ಲಿ ಕಣ್ಣೀರು ಉಕ್ಕಿ ಹರಿಯುತ್ತಿದೆ. ಶ್ರೀಮಾತೆಯವರ ಮಹಾಸಮಾಧಿಯ ಹಿಂದಿನ ದಿನ ರಾತ್ರಿ ಶರತ್ ಮಹಾರಾಜ್, ರಾತ್ರಿವೇಳೆಯ ಪಹರೆಯವನಂತೆ ಎಚ್ಚೆತ್ತಿದ್ದರು. ನಾವೂ ಅವರೊಂದಿಗಿದ್ದೆವು — ಏನಾದರೂ ಕೆಲಸಕ್ಕೆ ಅಗತ್ಯ ಬೀಳಬಹುದೆಂದು. ಆದರೆ ಎಲ್ಲ ಅಗತ್ಯಗಳೂ ಕೊನೆಗೊಂಡವು. ಶ್ರೀಮಾತೆಯವರ ಕಳೇಬರವನ್ನು ಹೊತ್ತುಕೊಂಡು ಬೇಲೂರು ಮಠಕ್ಕೆ ಮೆರವಣಿಗೆ ಹೋಗುವಾಗ, ಅದರೊಂದಿಗೆ ನಾನೂ ಸೇರಿಕೊಂಡೆ. ಚಿತೆಗೆ ಅಗ್ನಿಸ್ಪರ್ಶವಾಗಿ, ಬೆಂಕಿಯ ಜ್ವಾಲೆಗಳು ಮೇಲಕ್ಕೆದ್ದಾಗ ಗಂಗಾನದಿಯ ಪೂರ್ವದಿಕ್ಕಿನಲ್ಲಿ ಮುಸಲಧಾರೆಯಂತೆ ಮಳೆಯಾಗುತ್ತಿತ್ತು. ಆದರೆ ಆಶ್ಚರ್ಯ! ನದಿಯ ಈ ದಡದಲ್ಲಿ ಮಳೆಯೇ ಇಲ್ಲ! ಚಿತೆಯು ಆರಿಹೋಗುತ್ತಿದ್ದಂತೆ ಶರತ್ ಮಹಾರಾಜ್ ಮೊದಲು ಒಂದು ಕೊಡ ನೀರನ್ನು ಅದರ ಮೇಲೆ ಸುರಿದರು. ಅಷ್ಟರಲ್ಲಿ ಸಣ್ಣಗೆ ಜಿನುಗುತ್ತಿದ್ದ ಮಳೆ ಧೋ ಎಂದು ಸುರಿಯಲಾರಂಭಿಸಿ, ಚಿತೆಯನ್ನೆಲ್ಲ ತೊಯ್ಯಿಸಿತು. ಚಿತೆಗೆ ನೀರು ಸುರಿದವರಲ್ಲಿ ಶರತ್ ಮಹಾರಾಜರೇ ಮೊದಲು ಹಾಗೂ ಕೊನೆ. ಬೇರೆಯಾರೂ ನೀರು ಸುರಿಯಲಾಗಲಿಲ್ಲ. ಸ್ವರ್ಗದಲ್ಲಿರುವ ದೇವತೆಗಳೇ ಈ ರೀತಿಯ ಜಡಿಮಳೆಯನ್ನು ಕರೆದಿರಬೇಕು.

ಶ್ರೀಮಾತೆಯವರ ನಂತರ ನನಗೆ ಅತಿಹೆಚ್ಚಿನ ಭಕ್ತಿ-ಶ್ರದ್ಧೆಗಳಿದ್ದುದು ಶರತ್ ಮಹಾರಾಜರ ಮೇಲೆ. ಶ್ರೀಮಾತೆ ನನಗೆ ಹೇಳಿದ್ದರು: ''ಶರತ್ ಸಾಧಾರಣ ಬ್ರಹ್ಮಜ್ಞಾನಿಯಲ್ಲ. ಅವನು ಸರ್ವಭೂತಗಳಲ್ಲಿ ಕೇವಲ ಬ್ರಹ್ಮನನ್ನು ನೋಡುವುದಲ್ಲ; ಎಲ್ಲ ಸ್ತ್ರೀಯರಲ್ಲಿ ನನ್ನನ್ನೇ ಕಾಣುತ್ತಾನೆ, ಎಲ್ಲ ಪುರುಷರಲ್ಲಿ ಠಾಕೂರರನ್ನೇ ನೋಡುತ್ತಾನೆ. ಶರತ್‌ನಂತಹ ಹೃದಯವನ್ನು ಎಲ್ಲೂ ನೋಡಲಾಗದು. ನರೇನ್‌ನ ನಂತರ ಇವನ ಹೃದಯವೇ ದೊಡ್ಡದು.'' ನಿಜವಾಗಿಯೂ ಅವರಿಗೆ ಎಷ್ಟು ದೊಡ್ಡದಾದ ದೇಹವಿತ್ತೋ, ಅಷ್ಟೇ ವಿಶಾಲವಾದ ಹೃದಯವಿತ್ತು. ಎಷ್ಟು ಮಂದಿ ದುಃಖಿತರಿಗೆ, ಬಡವರಿಗೆ, ಕಷ್ಟದಲ್ಲಿದ್ದ ಹೆಣ್ಣುಮಕ್ಕಳಿಗೆ, ಹಾಗೂ ಅಸಹಾಯಕರಾದ ವಿಧವೆಯರಿಗೆ ಅವರು ರಹಸ್ಯವಾಗಿ ಸಹಾಯ ಮಾಡಿದ್ದಾರೆ ಎಂಬುದನ್ನು ಎಣಿಸುವುದಕ್ಕೆ ಸಾಧ್ಯವಿಲ್ಲ. ಒಂದು ದಿನ ಒಬ್ಬರು ತರುಣ ಸಂನ್ಯಾಸಿಗಳು ನೋಡುತ್ತಾರೆ, ಶರತ್ ಮಹಾರಾಜ್ ಮಧ್ಯಾಹ್ನದ ಊಟ ಮುಗಿಸಿ, ವಿಶ್ರಾಂತಿ ಪಡೆದ ಬಳಿಕ ಹೊರಗಡೆ ಹೋಗುತ್ತಿದ್ದರು. ಸಂನ್ಯಾಸಿ ಕೇಳಿದರು: ''ಮಹಾರಾಜ್, ನೀವು ಯಾವ ಕಡೆಗೆ ಹೊರಟಿದ್ದೀರಿ?'' ಶರತ್ ಮಹಾರಾಜ್, ''ಸ್ವಲ್ಪ ಕೆಲಸವಿದೆ'' ಎಂದು ಹೇಳಿ ರಸ್ತೆಗಿಳಿದರು. ಯುವಕ ಸಂನ್ಯಾಸಿಗೆ ಕುತೂಹಲವುಂಟಾಯಿತು. ಮಹಾರಾಜ್ ಯಾವ ಕಡೆಗೆ ಹೋಗುತ್ತಾರೋ ನೋಡಬೇಕೆಂದು. ಅವರು ದೂರದಿಂದಲೇ ಶರತ್ ಮಹಾರಾಜರನ್ನು ಹಿಂಬಾಲಿಸತೊಡಗಿದರು. ಮಹಾರಾಜ್ ನಡೆಯುತ್ತಾ ಹೋಗಿ, ಒಂದು ಕೊಳೆಗೇರಿ ಪ್ರದೇಶದ ಒಳಗೆ ಹೊಕ್ಕರು. ಆ ಸಂನ್ಯಾಸಿ ಕೂಡ ಅವರ ಹಿಂದೆಯೇ ಹೋದರು. ಶರತ್ ಮಹಾರಾಜ್ ಒಂದು ಮನೆಯ ಒಳಕ್ಕೆ ಹೋದರು; ಅವರನ್ನೇ ಅನುಸರಿಸುತ್ತ ಆ ತರುಣ ಸಂನ್ಯಾಸಿ ಆ ಮನೆಯ ಸಮೀಪ ನಿಂತರು. ಮನೆಯೊಳಕ್ಕೆ ಇಣ



ಸ್ವಾಮಿ ಶಾರದಾನಂದರು

ುಕಿ ನೋಡಿದರೆ, ಅಲ್ಲಿ ಒಂದು ಸಣ್ಣ ಕೋಣೆಯಲ್ಲಿ ಮೂಳೆ ಚಕ್ಕಳವಾಗಿದ್ದ ವ್ಯಕ್ತಿಯೊಬ್ಬ ಮಲಗಿ ಕೆಮ್ಮುತ್ತಿದ್ದ. ಮಹಾರಾಜ್ ಅವನ ಪಕ್ಕ ಕುಳಿತು, ಅವನ ಎದೆಯ ಮೇಲೆ ಕೈಯಿಟ್ಟು ಹೇಳು ತ್ತಿದ್ದಾರೆ: ''ನೀನು ಹೇಗಿದ್ದೀಯಾ?'' ಆ ವ್ಯಕ್ತಿ ಕೆಮ್ಮುತ್ತ ಹೇಳಿದ, ''ಸುಮಾರಾಗಿದ್ದೇನೆ.'' ಮಹಾರಾಜ್ ಸ್ನೇಹದಿಂದ ಹೇಳಿದರು, ''ಆದರೆ ನೀನು ಮೊದಲಿಗಿಂತ ಚೆನ್ನಾಗಿರುವಂತೆ ಕಾಣಿಸು ತ್ತಿದ್ದೀಯಾ. ಸರಿಯಾಗಿ ಔಷಧಿ ಸೇವಿಸುತ್ತಿದ್ದೀ ತಾನೆ? ಹಣ್ಣು ಹಂಪಲು ಎಲ್ಲ ಮುಗಿದು ಹೋಗಿರುವ ಹಾಗೆ ಕಾಣುತ್ತದೆ, ಹೌದೇನು?'' ಆತ ಹೇಳಿದ, ''ಔಷಧ ಸೇವಿಸುತ್ತಿದ್ದೇನೆ. ಹಣ್ಣು ಗಳನ್ನು ಕೂಡ ತಿನ್ನುತ್ತೇನೆ. ಆದರೆ ನೀವು ಎಷ್ಟೇ ಪ್ರಯತ್ನ ಮಾಡಿ, ಎಷ್ಟೇ ಔಷಧಿ, ಹಣ್ಣು ಇವನ್ನೆಲ್ಲ ನನಗೆ ತಿನ್ನಿಸಿ; ನನ್ನ ಈ ರೋಗದಿಂದ ನಾನು ಪಾರಾಗಿ ಬದುಕಿ ಉಳಿಯಲಾರೆ ಎಂದು ನನಗೆ ಗೊತ್ತು.'' ಮಹಾರಾಜ್ ಪ್ರೀತಿ ತುಂಬಿದ ಸ್ವರದಿಂದ, ''ನೀನು ಉಳಿಯಲಾರೆ ಅಂತ ಯಾರು ಹೇಳುತ್ತಾರಂತೆ! ಒಂದೇ ಬಾರಿಗೆ ನೀನು ಗುಣಮುಖನಾಗುವೆ. ಈ ಔಷಧಿ, ಹಣ್ಣುಗಳನ್ನು ಇಲ್ಲಿ ಇಟ್ಟು ಹೋಗುತ್ತೇನೆ. ನೀನು ಅವುಗಳನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳಬೇಕು'' ಎಂದರು. ಮಹಾರಾಜರ ಮಾತುಗಳನ್ನು ಕೇಳಿ ಅವನು ಅಳುತ್ತ ಹೇಳತೊಡಗಿದ, ''ಮಹಾ ರಾಜ್, ನೀವು ಮನುಷ್ಯರಲ್ಲ — ದೇವತೆ. ಈ ರೋಗದ ಭಯದಿಂದ ನನಗೆ ಆತ್ಮೀಯರಾದವರೆಲ್ಲ ನನ್ನನ್ನು ಬಿಟ್ಟು ಓಡಿ ಹೋಗಿದ್ದಾರೆ. ಆದರೆ ನೀವಾದರೋ, ನನ್ನ ಬಳಿಯಲ್ಲೇ ಭಯ ವಿಲ್ಲದೆ ಕುಳಿತುಕೊಂಡಿದ್ದೀರಿ. ನನಗೆ ಔಷಧಿ ಹಾಗೂ ಪಥ್ಯದ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ.'' ಯುವಕ ಸಂನ್ಯಾಸಿಗೆ ಹೊರಗಿ ನಿಂದ ಕಿಟಕಿಯ ಮುಲಕ ಈ ದೃಶ್ಯವನ್ನು ಕಂಡು, ಸುಮ್ಮನಿರ ಲಾಗಲಿಲ್ಲ. ಕೂಡಲೇ ಆ ಕೋಣೆಯ ಒಳಹೊಕ್ಕು ಮಹಾರಾಜರ ಕಾಲಿಗೆ ಬಿದ್ದರು. ಅಳುತ್ತ ಹೇಳಿದರು, ''ಮಹಾರಾಜ್, ನಾನು ಮಹಾ ಅಪರಾಧಿ. ನಿಮ್ಮ ಮೇಲೆ ನಾನು ಕ್ಷುದ್ರ ಸಂದೇಹ ತಾಳಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ.'' ಮಹಾರಾಜರು ಈ ಸಂನ್ಯಾಸಿಯನ್ನು ನೋಡಿ ಅವಾಕ್ಕದರು. ಅವರು ಶಾಂತಭಾವ ದಿಂದ ಇಷ್ಟು ಮಾತ್ರ ಹೇಳಿದರು: ''ಸಂದೇಹವನ್ನು ಮನಸ್ಸಿನಲ್ಲೇ ಬೆಳೆಯುವುದಕ್ಕೆ ಬಿಡದೆ, ಒಡನೆಯೇ ಅದಕ್ಕೆ ಪರಿಹಾರ ಕಂಡು ಕೊಂಡು ಒಳ್ಳೆಯ ಕೆಲಸವನ್ನೇ ಮಾಡಿದ್ದೀಯ. ಹೀಗೇ ಮಾಡ ಬೇಕು.''

ಮಹಾರಾಜರ ಸೇವಕರಾಗಿದ್ದ ಸ್ವಾಮಿ ಅಶೇಷಾನಂದರಿಂದ (ಕಿರಣ್ ಮಹಾರಾಜ್) ಇಂತಹದೇ ಒಂದು ಘಟನೆಯನ್ನು ನಾನು ಕೇಳಿದ್ದೇನೆ. ಎಜರಾ ಸ್ಟ್ರೀಟಿನಲ್ಲಿದ್ದ ಒಂದು ಹೋಟೆಲಿನಲ್ಲಿ ವಾಸವಾಗಿದ್ದ, ಬಂಗಾಳಿಯಲ್ಲದ ಒಬ್ಬ ವ್ಯಕ್ತಿಯ ಕಥೆ ಅದು. ಕ್ಷಯರೋಗದಿಂದ ಅವನು ಬಳಲುತ್ತಿದ್ದ. ಅವನ ಹೆಸರು ಖೋಕಾನಿ ಎಂದು. ಅವನಿಗೆ ಆತ್ಮೀಯ ವ್ಯಕ್ತಿಗಳಾಗಲಿ, ಬಂಧು ಗಳಾಗಲಿ ಇರಲಿಲ್ಲ. ಮಹಾರಾಜ್ ಆಗಾಗ ಗುಟ್ಟಾಗಿ ಹೋಟೆಲಿಗೆ ಹೋಗಿ ಅವನನ್ನು ನೋಡಿ ಬರುತ್ತಿದ್ದರು. ಅವನೊಂದಿಗೆ ಸ್ವಲ್ಪ ಸಮಯ ಕಳೆಯುತ್ತಿದ್ದರು. ಅವನ ಮಂಚದಲ್ಲಿ ಕುಳಿತು, ಅವನು ಬಿಡಿಸಿಕೊಟ್ಟ ಹಣ್ಣುಗಳನ್ನು ನಿರ್ಭಾವುಕರಾಗಿ ಅವರು ತಿನ್ನುತ್ತಿದ್ದರು. ಅನೇಕ ಬಾರಿ ಆತ ಕೆಮ್ಮುತ್ತಲೇ ಹಣ್ಣು ಬಿಡಿಸು ತ್ತಿದ್ದ, ಕೆಮ್ಮುತ್ತಲೇ ಮಹಾರಾಜರಿಗೆ ಅದನ್ನು ಕೊಡುತ್ತಿದ್ದ.

ಶರತ್ ಮಹಾರಾಜರು ನನ್ನ ಮೇಲೆ ದಯೆ ತೋರಿರುವ ಬಗ್ಗೆ ಇನ್ನೇನು ಹೇಳಲಿ! ಇಂದು ನನಗೆ ಕಲ್ಕತ್ತೆಯಲ್ಲಿ ಒಂದು ಆಶ್ರಯ ಒದಗಿ ಬಂದಿರುವುದಕ್ಕೂ, ನಾನು ತಿಂದುಂಡು, ಬಟ್ಟೆ ಬರೆ ತೊಟ್ಟು ಬಂಧುಬಳಗದೊಂದಿಗೆ ಸ್ವಚ್ಛಂದವಾಗಿ ವಾಸ ವಾಗಿರುವುದರ ಹಿಂದೆ ನಿಜಕ್ಕೂ ಶ್ರೀಮಾತೆಯ ಕೃಪೆಯೇ ಇದೆ. ಆದರೆ ಅವರ ಕೃಪೆ ನನ್ನ ಕಡೆಗೆ ಹರಿದುಬಂದು ಕಾರ್ಯಗತ ವಾಗಿರುವುದು ಶರತ್ ಮಹಾರಾಜರ ಮೂಲಕ. ನನ್ನ ತಂದೆಯ ಕೊನೆಯ ದಿನಗಳಲ್ಲಿ ಕಲ್ಕತ್ತೆಯ ದೊಡ್ಡ ಡಾಕ್ಟರರ ಮೂಲಕ ಅವರಿಗೆ ಚಿಕಿತ್ಸೆ ಕೊಡಿಸಿದ್ದೆ. ಇದು ಸಾಧ್ಯವಾಗಿರುವುದು ಶರತ್ ಮಹಾರಾಜರು ವ್ಯವಸ್ಥೆ ಮಾಡಿಕೊಟ್ಟದ್ದರಿಂದ — ಈ ವಿಷಯ ವನ್ನು ಈಗಾಗಲೇ ಹೇಳಲಾಗಿದೆ. ೧೯೧೯ರ ವೈಶಾಖ ಮಾಸದ ೧೨ನೇ ದಿನದಂದು ಸಾಯಂಕಾಲ ೫.೩೦ರ ವೇಳೆಗೆ ತಂದೆ ಕೊನೆಯುಸಿರು ಎಳೆದರು. ಅದಕ್ಕೂ ಮೊದಲು, ವೈಶಾಖ ೩ರಂದು ಶರತ್ ಮಹಾರಾಜ್ ನನ್ನನ್ನು ಕರೆದು ಹೇಳಿದರು, ''ಒಂದು ಗಾಡಿ ಕರೆದುಕೊಂಡು ಬಾ.'' ನಾನು ಕೇಳಿದೆ, ''ಎಲ್ಲಿಗೆ ಹೋಗುತ್ತೀರಿ, ಮಹಾರಾಜ್?'' ಅದಕ್ಕೆ ಮಹಾರಾಜ್, ''ನಿನ್ನ

ಹಿಡಿದಿದ್ದರು; ಯಾವಾಗ ಬೇಕಾದರೂ ಅವರು ದೇಹತ್ಯಾಗ ಮಾಡಬಹುದು ಎಂಬಂತಿತ್ತು ಅವರ ಅವಸ್ಥೆ. ಶರತ್ ಮಹಾರಾಜ್ ಪ್ರತಿದಿನವೂ ನನ್ನಿಂದ ಅವರ ಬಗ್ಗೆ ಕೇಳಿ ತಿಳಿಯುತ್ತಿದ್ದರು. ಆದರೆ ಇಂದು ಅವರ ಮಾತನ್ನು ಕೇಳಿದಾಗ ನಾನು ಅತ್ಯಂತ ಅಸಹಾಯಕನೆಂಬ ಭಾವನೆ ನನ್ನಲ್ಲಿ ಮೂಡಿತು. ಕಾರಣ, ಮೊದಲನೆಯದಾಗಿ ಗಾಡಿಯ ಬಾಡಿಗೆ ಕೊಡಲು ನಾನು ಶಕ್ತನಾಗಿರಲಿಲ್ಲ ; ಎರಡನೆಯದಾಗಿ, ಶೋಭಾಬಜಾರಿನ ಎದುರಿನಲ್ಲಿದ್ದ ಶಿವಮಂದಿರ ಪಕ್ಕದ ನಂದರಾಮ ಸೇನ್ ಲೇನ್‌ನಲ್ಲಿದ್ದ ಸಣ್ಣ ಗಲ್ಲಿಯಲ್ಲಿ ನನ್ನ ತಂದೆಯಿದ್ದರು — ಅಲ್ಲಿ ಶರತ್ ಮಹಾರಾಜರಿಗೆ ಸಲೀಸಾಗಿ ನಡೆಯುವುದು ಅಸಾಧ್ಯವಾಗಿತ್ತು.

ಈ ಎರಡು ಕಾರಣಗಳಿಂದ ಗಾಡಿಯನ್ನು ಕರೆದುಕೊಂಡು ಬರಲು ನಾನು ಹಿಂದೇಟು ಹಾಕಿದೆ; ಅದನ್ನು ನಾನು ಶರತ್ ಮಹಾರಾಜರಿಗೆ ತಿಳಿಸಿದೆ. ಅವರು ಗಂಭೀರಭಾವ ತಾಳಿ ಹೇಳಿದರು: ''ಗಾಡಿ ಕರೆದುಕೊಂಡು ಬಾ. ಉಳಿದದ್ದನ್ನೆಲ್ಲ ಆಮೇಲೆ ನೋಡೋಣ.'' ನಾನು ಗಾಡಿ ಕರೆದುಕೊಂಡು ಬಂದೆ. ಗಾಡಿ ಶರತ್ ಮಹಾರಾಜ್ ಹಾಗೂ ನನ್ನನ್ನು ಕರೆದುಕೊಂಡು ಹೋಗಿ, ಆ ಸಣ್ಣ ಗಲ್ಲಿಯ ಮುಂದೆ ನಿಂತಿತು. ಗಾಡಿಯಿಂದ ಇಳಿದು ಶರತ್ ಮಹಾರಾಜರನ್ನು ಕರೆದುಕೊಂಡು ಗಲ್ಲಿಯಲ್ಲಿ ಹೋಗುತ್ತಿದ್ದಾಗ ನಾನು ಎಣಿಸಿದ್ದಂತೆಯೇ ಆಯಿತು — ಶರತ್ ಮಹಾರಾಜರಿಗೆ ಅಲ್ಲಿ ನೇರ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಆಗ ನನಗೆ ತುಂಬಾ ಕಸಿವಿಸಿಯಾಯಿತು. ಆದರೆ ಆಶ್ಚರ್ಯದಿಂದ ನಾನು ನೋಡಿದೆ, ಶರತ್ ಮಹಾರಾಜ್ ನನ್ನ ಹಿಂದೆಯೇ ಓರೆ ಓರೆಯಾಗಿ ನಡೆಯುತ್ತ ಬರತೊಡಗಿದ್ದಾರೆ! ಮನೆಗೆ ಹೋಗಿ ಮಹಾರಾಜರು ನನ್ನ ತಂದೆಯ ಮಂಚದ ಬಳಿ ನಿಂತರು. ನನಗೆ ಹೇಳಿದರು, ''ನನ್ನ ಪಾದದ ಧೂಳಿಯನ್ನು ಕೈಯಲ್ಲಿ ತೆಗೆದುಕೊಂಡು ನಿನ್ನ ತಂದೆಯ ತಲೆಗೆ ಸ್ಪರ್ಶಿಸು.'' ಈ ಮಾತನ್ನು ಕೇಳಿ, ನನ್ನ ಮನಸ್ಸು, ಪ್ರಾಣ ಎಲ್ಲವೂ ಆನಂದದಿಂದ ತುಂಬಿಕೊಂಡಿತು ನಿಜ; ಆದರೆ ಅದರಿಂದ ನನಗುಂಟಾದ ವಿಸ್ಮಯವೂ ಕಡಿಮೆಯಾಗಿರಲಿಲ್ಲ. ಕಾರಣ, ಶರತ್ ಮಹಾರಾಜರು ಯಾರಿಂದಲೂ ಪ್ರಣಾಮ ಸ್ವೀಕರಿಸಬಯಸುತ್ತಿರಲಿಲ್ಲ. ಈ ರೀತಿ ಅವರು ಅಯಾಚಿತವಾಗಿ ಕರುಣೆಯ ಭಾವದಿಂದ ಗೋಚರಿಸಬಲ್ಲರೆಂಬ ವಿಷಯ ನನ್ನ ಊಹೆಗೂ ಮೀರಿದ್ದಾಗಿತ್ತು. ಅದೇನೇ ಇರಲಿ, ನಾನು ಆನಂದ, ವಿಸ್ಮಯಗಳಿಂದ ಮಹಾರಾಜರ ಪಾದಗಳ ಧೂಳಿಯನ್ನು ತೆಗೆದುಕೊಂಡು ನನ್ನ ತಂದೆಯ ತಲೆಗೆ ಸ್ಪರ್ಶಿಸಿದೆ. ನನ್ನ ತಂದೆ ಮಲಗಿದ್ದಲ್ಲಿಂದಲೇ ಕೈಜೋಡಿಸಿ ಮಹಾರಾಜರಿಗೆ ಪ್ರಣಾಮ ಸಲ್ಲಿಸಿದರು. ಮಹಾರಾಜ್ ನನ್ನ ತಂದೆಯವರಿಗೆ, ''ನಿಮಗೆ ಕಾಶಿಗೆ ಹೋಗುವ ಆಸೆ ಇದೆಯೆ?'' ಎಂದು ಕೇಳಿದರು. ತಂದೆ ತಲೆ ಅಲ್ಲಾಡಿಸಿದರು. ಅವರು ಯಾಕೆ ಹಾಗೆ ಬೇಡವೆಂದು ತಲೆ ಅಲ್ಲಾಡಿಸಿದರೋ ನನಗೆ ತಿಳಿಯದು; ಆದರೆ ನನಗನ್ನಿಸಿತು, ಕೊನೆಗಾಲದಲ್ಲಿ ಶರತ್ ಮಹಾರಾಜರಂತಹ, ಶಿವನಿಗೆ ಸಮಾನರಾದ ಮಹಾಪುರುಷರ ದರ್ಶನ ಹಾಗೂ ಆಶೀರ್ವಾದ ದೊರಕಿದ ಮೇಲೆ, ತಂದೆಗೆ ಕಾಶಿಯಲ್ಲಿ ಸಾವನ್ನಪ್ಪುವ ಬಯಕೆ ತುಚ್ಛವೆನ್ನಿಸಿರಬೇಕು.

ಗಾಡಿ ಕಾದು ನಿಂತಿತ್ತು. ಮಹಾರಾಜರನ್ನು ಮರಳಿ 'ಉದ್ಬೋಧನ'ಕ್ಕೆ ಕರೆದುಕೊಂಡು ಬಂದೆ. ಕೆಲವು ದಿನಗಳ ನಂತರ ಮಧ್ಯಾಹ್ನದ ಪ್ರಸಾದ(ಊಟ)ವಾದ ಮೇಲೆ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದೆ. ಹೊರಗಿನಿಂದ ಪುಸ್ತಕಗಳಿಗಾಗಿ ಕೆಲವು ಆರ್ಡರ್ ಬಂದಿದ್ದವು. ಅವುಗಳನ್ನು ರೈಲಿನ ಮೂಲಕ ಪಾರ್ಸೆಲ್ ಮಾಡಿ ಕಳುಹಿಸಲು ನಾನು ಶಿಯಾಲ್ದಾ ಸ್ಟೇಶನ್ನಿಗೆ ಹೋಗಬೇಕಿತ್ತು. ಮಹಾರಾಜ್ ನನಗೆ, ''ಮೊದಲು ನಿನ್ನ ಮನೆಗೆ ಹೋಗಿ, ನಿನ್ನ ತಂದೆ ಹೇಗಿದ್ದಾರೆ ಎಂದು ನೋಡಿ ಬಾ. ಅನಂತರ ಶಿಯಾಲ್ದಾಗೆ ಹೋಗುವಿಯಂತೆ'' ಎಂದರು. ಅವರ ಆದೇಶದಂತೆ ಮನೆಗೆ ಹೋದೆ. ಆಗ ನನ್ನ ತಂದೆ ಕೊನೆಯ ಕ್ಷಣ ಹತ್ತಿರವಾಗಿತ್ತು. ಮಹಾರಾಜರಿಗೆ ಸುದ್ದಿ ತಿಳಿಸಲು ವೇಗವಾಗಿ ನಾನು 'ಉದ್ಬೋಧನ'ಕ್ಕೆ ಓಡಿಬಂದೆ. ಆಗ ಮಹಾರಾಜ್ ವಿಶ್ರಾಂತಿ ಪಡೆಯುತ್ತಿದ್ದರು. ಅವರ ಕೋಣೆಯ ಪಕ್ಕದಲ್ಲಿ ನಾನು ನಿಂತಿದ್ದೆ. ಹಠಾತ್ತನೆ ಮರಳಿ ಬಂದ ನನ್ನನ್ನು ಕಂಡು ಮಹಾರಾಜ್, ''ಏನಾಯಿತು? ತಂದೆ ಹೇಗಿದ್ದಾರೆ?'' ಎಂದು ಕೇಳಿದರು. ನಾನು ಹೇಗುಹೇಗೋ, ''ನನ್ನ ತಂದೆಯ ಕೊನೆಗಾಲ ಹತ್ತಿರವಾಗಿದೆ'' ಎಂದೆ. ಕೂಡಲೇ ಅವರು ಎದ್ದು, ಡ್ರಾಯರನ್ನು ತೆರೆದು ತುಸು ಹಣವನ್ನು ನನ್ನ ಕೈಗಿತ್ತು, ''ತಂದೆಯ ಅಂತ್ಯಕ್ರಿಯೆ ಮಾಡು'' ಎಂದರು. ಅಂದು ಸಾಯಂಕಾಲ ೫.೩೦ಕ್ಕೆ ತಂದೆ ಕಾಲವಾದರು. ಅದು ೧೯೧೯ರ ವೈಶಾಖ ೧೨ನೇ ದಿನ. ಮಹಾರಾಜ್ ತಮ್ಮ ಡೈರಿಯಲ್ಲಿ ಅಂದು ಹೀಗೆ ಬರೆದಿದ್ದರು: 'Chandra's father died at 5.30PM.'

ಶ್ರೀಮಾತೆಯವರ ಆಶ್ರಯವನ್ನು ಹೊಂದಿದ ಕೆಲವು ದಿನಗಳ ನಂತರ ನಾನು ಅವರ ಬಗ್ಗೆ ತುಸು ತಿಳಿದುಕೊಂಡ ಹಾಗೆಲ್ಲ ಒಂದು ದಿನ ಅವರ ಬಳಿಗೆ ಹೋಗಿ ಕೈಜೋಡಿಸಿ ಪ್ರಾರ್ಥಿಸಿಕೊಂಡಿದ್ದೆ, ''ಅಮ್ಮಾ, ನನಗೆ ನಿಮ್ಮ ಸೇವೆ ಮಾಡಬೇಕೆಂದು ಆಸೆ.'' ಅದಕ್ಕೆ ಶ್ರೀಮಾತೆ ಹೇಳಿದ್ದರು, ''ಚಂದು, ಇಲ್ಲಿ ನೀನು ಯಾವ ಯಾವ ಕೆಲಸಗಳನ್ನೆಲ್ಲ ಮಾಡುತ್ತಿದ್ದೀಯೋ ಅದೆಲ್ಲವೂ ನನ್ನ ಸೇವೆಯೇ.'' ನಾನಂದೆ, ''ಇಲ್ಲಮ್ಮಾ, ಆ ಎಲ್ಲ ಕೆಲಸಗಳನ್ನ ಮಾಡಿದ ನಂತರವೂ ನಾನು ನಿಮ್ಮ ಕೆಲವು ಸಣ್ಣಪುಟ್ಟ ಕೆಲಸಗಳನ್ನು ಮಾಡಬೇಕು ಅಂತ ನನಗೆ ಆಸೆ.'' ಶ್ರೀಮಾತೆ ಶಾಂತಭಾವದಿಂದ, ''ಇಲ್ಲ ಮಗೂ, ನೀನು 'ಉದ್ಬೋಧನ'ದಲ್ಲಿ ಯಾವ ಕೆಲಸ ಮಾಡುತ್ತಿದ್ದೀಯೋ ಅದನ್ನೇ ಮಾಡು. ಅದು ಹೇಗೆ ನನ್ನ ಸೇವೆಯೋ, ಅದೇ ರೀತಿ ಠಾಕೂರರ ಸೇವೆ ಕೂಡ. ಸರಳಾ[೬] ನನ್ನ ಸೇವೆ ಮಾಡುತ್ತಿದ್ದಾಳಲ್ಲ. 'ಉದ್ಬೋಧನ'ದ ಕೆಲಸ ಮಾಡುತ್ತ ನಿನಗೆ ಯಾವಾಗ ಬಿಡುವು, ಅವಕಾಶ ಸಿಗುತ್ತದೋ


೬ ಸರಳಾದೇವಿ. ಮುಂದೆ ಶ್ರೀಶಾರದಾ ಮಠದ ಅಧ್ಯಕ್ಷೆಯಾಗಿದ್ದ ಪ್ರವ್ರಾಜಿಕಾ ಭಾರತೀಪ್ರಾಣಾ. *(–ಸಂ)*

ಆಗ ಶರತ್‌ನ ಸೇವೆ ಮಾಡು. ನೀನು ಪ್ರಾಮಾಣಿಕವಾಗಿ ಅವನ ಸೇವೆ ಮಾಡು. ಅದರಿಂದ ಅವನು ಸಂತುಷ್ಟನಾದರೆ, ನಿನಗೆ ಬ್ರಹ್ಮಜ್ಞಾನವುಂಟಾಗುವುದು ಎಂದೇ ತಿಳಿ. ಯಾರು ಶರತ್‌ಗೆ ಪ್ರೀತಿಯಿಂದ ಸೇವೆ ಮಾಡುತ್ತಾರೋ. ಅವರ ಮುಕ್ತಿ ಅವರ ಜೇಬಿನಲ್ಲೇ ಇದೆ. ಶರತ್ ಠಾಕೂರರ ಗಣೇಶ, ನನ್ನ ಚೂಡಾಮಣಿ. ಇಡೀ ಪ್ರಪಂಚದಲ್ಲಿ ಶರತ್‌ನಂತಹ ಮಹಾಪುರುಷರು ಕೆಲವೇ ಮಂದಿ ಇದ್ದಾರೆ ಎಂದು ತಿಳಿ'' ಎಂದರು.

ಶ್ರೀಮಾತೆಯವರ ದೇಹತ್ಯಾಗವಾದ ನಂತರ ನಾನು ಶರತ್ ಮಹಾರಾಜರಲ್ಲಿ ಶ್ರೀಮಾತೆಯವರನ್ನೇ ಪಡೆದೆ. ಕೇವಲ ನಾನು ಮಾತ್ರವಲ್ಲ, ನನ್ನ ಹಾಗೆ ಅನೇಕ ಮಂದಿ, ಅಷ್ಟೇಕೆ — ಮಹಿಳಾ ಭಕ್ತರು ಕೂಡ ಶರತ್ ಮಹಾರಾಜರಲ್ಲಿ ಶ್ರೀಮಾತೆಯವರನ್ನು ಕಂಡಿದ್ದಾರೆ. ಶರತ್ ಮಹಾರಾಜರು ರಾಮಕೃಷ್ಣಮಯರಾಗಿದ್ದರು, ನಿಜ; ಆದರೆ ಅದಕ್ಕಿಂತಲೂ ಅವರು ಶ್ರೀಮಾತೆ-ಮಯರಾಗಿದ್ದರು, ಶಾರದಾಮಯರಾಗಿದ್ದರು ಎಂದೇ ಅನ್ನಿಸುತ್ತದೆ. ಸ್ವಾಮೀಜಿ ಅವರಿಗೆ 'ಶಾರದಾನಂದ' ಎಂಬ ಹೆಸರನ್ನು ಕೊಟ್ಟಿದ್ದರು, ಅದು ಸಂಪೂರ್ಣವಾಗಿ ಸಾರ್ಥಕವಾದ ಹೆಸರು. ನಾನು ಈ ಮಹಾಪುರುಷರ ಪದತಲದಲ್ಲಿ ಆಶ್ರಯವನ್ನು ಪಡೆದೆ ಎಂಬುದೇ ನನ್ನ ಜೀವನದ ಮಹಾಸೌಭಾಗ್ಯ. ನನ್ನ ಗುರು, ನನ್ನ ಜೀವನದ ಆರಾಧ್ಯ ದೇವಿ, ಸಾಕ್ಷಾತ್ ಜಗದಂಬೆ ಶ್ರೀಮಾತೆಯವರ ಕೃಪೆಯಿಂದಾಗಿ ನನು ನನ್ನ ಜೀವನದ ಬಹುಕಾಲವನ್ನು ಅವರ ಸಾನ್ನಿಧ್ಯದಲ್ಲಿ ಕಳೆಯುವಂತಾಯಿತು. ಶ್ರೀಮಾತೆಯವರೇ ಶರತ್ ಮಹಾರಾಜರನ್ನು ಕುರಿತಾಗಿ ನನ್ನ ಕಣ್ಣುಗಳನ್ನು ತೆರೆಸಿದರು.

*(ಸಮಾಪ್ತಿ)*

## ಯುವಚೇತನ



## ಜಗತ್ತಿಗೆ ಬುದ್ಧನ ಸಂದೇಶ

''ಪುರೋಹಿತರಿಗೂ, ಪ್ರವಾದಿಗಳಿಗೂ ನಡೆಯುತ್ತಿದ್ದ ತಿಕ್ಕಾಟದಲ್ಲಿ ಬುದ್ಧ ಜಯಶೀಲನಾಗಿದ್ದನು. ಆದರೆ ಇಂಡಿಯಾದೇಶದ ಪುರೋಹಿತರ ಪರವಾಗಿ ನಾವು ಇದೊಂದನ್ನು ಹೇಳಬಹುದು. ಅವರಿಗೆ ಎಂದಿಗೂ ಧರ್ಮದ ವಿಷಯದಲ್ಲಿ ಅಸಹನೀಯ ಭಾವನೆ ಇರಲಿಲ್ಲ. ಅವರೆಂದಿಗೂ ಧರ್ಮಕ್ಕಾಗಿ ಜನರನ್ನು ಹಿಂಸಿಸಲಿಲ್ಲ. ಯಾರೇ ಆದರೂ ತಮ್ಮ ವಿರೋಧವಾಗಿ ಬೋಧಿಸಬಹುದಾಗಿತ್ತು. ಅವರದು ಅಂತಹ ಧರ್ಮ, ಯಾರನ್ನೂ ಅವರು, ಅವರು ಹೊಂದಿದ್ದ ಧಾರ್ಮಿಕ ಭಾವನೆಗಾಗಿ ಹಿಂಸಿಸಿದವರಲ್ಲ. ಆದರೆ ಬಹು ಮಟ್ಟಿಗೆ ಎಲ್ಲಾ ಪುರೋಹಿತರಲ್ಲಿರುವ ದುರ್ಬಲತೆಯೊಂದು ಅವರಲ್ಲಿಯೂ ಇತ್ತು. ಅವರೂ ಅಧಿಕಾರವನ್ನು ಬಯಸಿದರು. ಅವರು ಹಲವು ಆಚಾರಗಳನ್ನೂ, ನಿಯಮಗಳನ್ನೂ ಬಳಕೆಗೆ ತಂದರು. ಧರ್ಮವನ್ನು ಅನವಶ್ಯಕವಾಗಿ ಜಟಿಲ ಸಮಸ್ಯೆಯಾಗಿ ಮಾಡಿ ತಮ್ಮ ಧರ್ಮದ ಅನುಯಾಯಿಗಳ ಶಕ್ತಿಯನ್ನು ತಗ್ಗಿಸಿದರು.

''ಬುದ್ಧನು ಈ ಅನವಶ್ಯಕವಾದ ಕಳೆಯನ್ನೆಲ್ಲಾ ಕಿತ್ತ. ಅವನು ಅದ್ಭುತವಾದ ಸತ್ಯಗಳನ್ನು ಬೋಧಿಸಿದ. ಯಾವ ಭೇದ ಭಾವವೂ ಇಲ್ಲದೆ ವೇದಗಳ ತತ್ತ್ವ ಸಾರವನ್ನೇ ಎಲ್ಲರಿಗೂ ಬೋಧಿಸಿದ. ಅವನು ಇಡೀ ಪ್ರಪಂಚಕ್ಕೆ ಅದನ್ನು ಬೋಧಿಸಿದ. ಮಾನವರೆಲ್ಲ ಸಮಾನರು ಎಂಬುದು ಅವನು ಬೋಧಿಸಿದ ಘನ ಸಂದೇಶಗಳಲ್ಲಿ ಒಂದಾಗಿತ್ತು. ಮನುಷ್ಯರೆಲ್ಲರೂ ಸಮಾನರು. ಯಾರಿಗೂ ವಿಶೇಷ ಹಕ್ಕಿರಬೇಕಾಗಿಲ್ಲ. ಸಮಾನತೆಯ ಸಂದೇಶವನ್ನು ಸಾರಿದ ಮಹಾಗುರು ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಲು ಸಮಾನವಾದ ಅಧಿಕಾರವಿದೆ ಎಂದ. ಇದೇ ಅವನ ಸಂದೇಶ. ಬ್ರಾಹ್ಮಣರಿಗೂ, ಇತರ ವರ್ಣದವರಿಗೂ ಇದ್ದ ವ್ಯತ್ಯಾಸವನ್ನು ಅವನು ತೊಡೆದುಹಾಕಿದ. ಅತಿ ನೀಚ ಜಾತಿಯವರು ಕೂಡ ಅತಿ ಶ್ರೇಷ್ಠತೆಗೆ ಅರ್ಹರಾದರು. ಎಲ್ಲರಿಗೂ ಆತ ನಿರ್ವಾಣದ ಬಾಗಿಲನ್ನು ತೆರೆದ. ಭರತಖಂಡದ ಜನರಿಗೆ ಕೂಡ ಅವನ ಸಂದೇಶ ಬಹಳ ಸಾಹಸದ್ದಾಗಿ ಕಾಣಿಸಿತು. ಎಂಥ ಧಾರ್ಮಿಕ ಬೋಧನೆಯನ್ನಾದರೂ ಭಾರತೀಯ ಅರಗಿಸಿಕೊಳ್ಳಬಲ್ಲ. ಆದರೂ ಭಾರತೀಯರಿಗೆ ಬುದ್ಧನ ಸಂದೇಶವನ್ನು ಒಪ್ಪಿಕೊಳ್ಳಲು ಕಷ್ಟವಾಯಿತು.

''ಬುದ್ಧನ ಜೀವನವೇ ಒಂದು ದೊಡ್ಡ ಆಕರ್ಷಣೆಯಾಗಿದೆ. ನನಗೆ ಬುದ್ಧನ ಜೀವನದ ಮೇಲೆ ಪ್ರೀತಿ, ಆದರೆ ಅವನ ಸಿದ್ಧಾಂತದ ಮೇಲೆ ಇಲ್ಲ. ನಾನು ಆ ಪವಿತ್ರಾತ್ಮನ ಶೀಲವನ್ನು ಎಲ್ಲರಿಗಿಂತ ಹೆಚ್ಚಾಗಿ ಗೌರವಿಸುತ್ತೇನೆ. ಅವನಲ್ಲಿದ್ದ ಧೈರ್ಯ, ನಿರ್ಭಯತೆ,ಅದ್ಭುತ ಪ್ರೇಮ! ಮಾನವ ಹಿತಕ್ಕಾಗಿ ಅವನು ಜನ್ಮವೆತ್ತಿದ. ಇತರರು ತಮಗಾಗಿ ದೇವರನ್ನು ಹುಡುಕಿರಬಹುದು, ಸತ್ಯವನ್ನು ಹುಡುಕಿರಬಹುದು. ಆದರೆ ಈತ ಕೇವಲ ತನಗಾಗಿ ಮಾತ್ರ ಸತ್ಯವನ್ನು ಹುಡುಕಲೆತ್ನಿಸಿದವನಲ್ಲ. ಜನರು ದುಃಖದಲ್ಲಿದ್ದುದರಿಂದ ಅವನು ಸತ್ಯವನ್ನು ಅರಸಿದ. ಅವರಿಗೆ ಹೇಗೆ ಸಹಾಯ ಮಾಡಬೇಕು ಎಂಬುದೊಂದೇ ಅವನ ಜೀವನದ ಏಕಮಾತ್ರ ಧ್ಯೇಯವಾಗಿತ್ತು. ಬದುಕಿರುವ ಪರ್ಯಂತರ ಒಮ್ಮೆಯಾದರೂ ತನಗಾಗಿ ಯೋಚಿಸಿದವನಲ್ಲ ಅವನು. ಈ ಮಹಿಮನ ಮಾಹಾತ್ಮ್ಯವನ್ನು ನಮ್ಮಂತಹ ಅಜ್ಞರು, ಸ್ವಾರ್ಥಿಗಳು, ಸಂಕುಚಿತ ದೃಷ್ಟಿಯವರು ಹೇಗೆ ಅರ್ಥ ಮಾಡಿಕೊಳ್ಳಬಲ್ಲರು?''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೭, ಪು. ೪೪-೫೦)*